# ಅಪರಂಜಿ

ತಿಳಿನಗೆಯ ಕಾರಂಜಿ

ಸೆಪ್ಟಂಬರ್ 2019




ನೀವು ಅಗತ್ಯವಾಗಿ ಮನೇಯಿಂದ್ಲೆ ಕೆಲ್ಸಾ ಮಾಡ್ಬೋದು,
ಆದ್ರೆ ವಾರಾಂತ್ಯದಲ್ಲಿ ಮಾತ್ರಾ!

ಬಿಡಿ ಪ್ರತಿ: ರೂ.10.00



# ಅಪರಂಜಿ

ತಿಳಿನಗೆಯ ಕಾರಂಜಿ

ಸಂಪುಟ 36
ಸಂಚಿಕೆ - 12
ಸೆಪ್ಟಂಬರ್- 2019

**ಸಂಪಾದಕ ಮಂಡಳಿ**

**ಸಂಪಾದಕರು**
ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**
ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**
ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**
ಶ್ರೀಉಲ್ಲಾಸ ರಾಯಸಂ

**ಟ್ರಸ್ಟಿಗಳು**
ಶ್ರೀಎಂ ಶಿವಕುಮಾರ್
ಶ್ರೀಬೇಲೂರು ರಾಮಮೂರ್ತಿ
ಶ್ರೀವಿ.ಆರ್. ನಾಥ್
ಶ್ರೀಎಚ್.ಎನ್. ಆನಂದ
ಶ್ರೀಸಿ.ಆರ್. ಸತ್ಯ
ಶ್ರೀಕೆ. ರವೀಂದ್ರ ರಾವ್

**ಚಂದಾ ವಿವರ:**
**ಬಿಡಿ ಪ್ರತಿ: ರೂ. 10/-**
**ವಾರ್ಷಿಕ ಚಂದಾ: ರೂ. 100/-**
**ಹತ್ತು ವರ್ಷದ ಚಂದಾ: ರೂ. 750-**

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:
ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ

## *ಈ ಸಂಚಿಕೆಯಲ್ಲಿ.....*


| | | |
|---|---|---|
| ಅಪರಂಜಿ ಕಿಡಿ | ಪ್ರಕಾಶ್ | 2 |
| ನಮ್ಮ ನಿಮ್ಮಲ್ಲಿ | ಶಿವಕುಮಾರ್ | 3 |
| ಮಾಲಕ್ಷ್ಮಕ್ಕ ಶಾವಿಗೆ ... | ಅ.ರಾ.ಸೇ. | 8 |
| ಅರಮನೆ0ಯ ಸ್ವಾರಸ್ಯಗಳು | ಸುಕೇಶವ | 13 |
| ತುಂತುರು | ದಂನಳ | 18 |
| ಪುರಾಣದ ನವ್ಯ ಕಥೆಗಳು | ಶಿವು | 19 |
| ಕ್ರಾಂತಿಕಾರಿಯೊಬ್ಬನ ಸ್ವಗತ | ಎಚ್. ಗೋಪಾಲಕೃಷ್ಣ | 24 |
| ರೀಟಾ ವೆಡ್ಸ್ ಸ್ಯಾಮ್ | ಪ್ರಕಾಶ್ ಆರ್. | 27 |
| ಲೀಗಲ್ ನೋಟೀಸಿನ.... | ಎಚ್.ಆರ್. ಹನುಮಂತ ರಾವ್ | 31 |
| ದೊಡ್ಡೋರಾದ್ಮೇಲೆ | ಎಚ್. ಶಾಂತರಾಜ ಐತಾಳ | 34 |
| ಅಪ್ಪ0ಯ್ಯನ ಕೋಪ | ಪ್ರೇಮಾ ಭಟ್ | 37 |
| ಮಾಸ್ತಿ | ಬೆಳೆಗೆರೆ ಕೃಷ್ಣ ಶಾಸ್ತ್ರಿ | 39 |


**ಮುಖಪುಟ ವ್ಯಂಗ್ಯಚಿತ್ರ : ಸುನಿಲ್ ಅಗರವಾಲ್ ಮತ್ತು ಅಜಿತ್ ನಿನಾನ್**

*ಪ್ರಕಾಶಕರು:* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003. *ಸಂಪರ್ಕ* : email: koravanjiaparanji@gmail.com ದೂ: 9845264304

*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 080-26688488. email: beluruRamamurthy@gmail.com

*ಮುದ್ರಣ: ರವಿ ಗ್ರಾಫಿಕ್ಸ್ - ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್*

# ಅಪರಂಜಿ ಕಿಡಿ

● ಪ್ರಕಾಶ್



ಟಿಪ್ಪು ಜಯಂತಿ ಆಚರಣೆ ರದ್ದು– ಶೀರ್ಷಿಕೆ

**ಮೈಸೂರು ಹುಲಿಗಳು ಪ್ರತಿಭಟಿಸಿದವಂತೆ!!**

★★★

ಕಾರಂತ ಬಡಾವಣೆ ಭೂಸ್ವಾಧೀನ ಅಕ್ರಮ – ಸುದ್ದಿ

**ಕಡಲ ತೀರದ ಭಾರ್ಗವರ ಆತ್ಮ ನಸುನಕ್ಕಿತಂತೆ!!**

★★★

ಅನರ್ಹ ಶಾಸಕರ ಉಚ್ಚಾಟನೆ – ಪತ್ರಿಕೆ

**"ಅರ್ಹರೆಲ್ಲ ಸಾಲಾಗಿ ನಿಲ್ಲಿ?"**

★★★

ವೈದ್ಯಕೀಯ ಕಾಲೇಜುಗಳ ಅಕ್ರಮ, ಹೆಚ್ಚುವರಿ ಶುಲ್ಕ – ಪತ್ರಿಕೆ

**ಈ ಕಾಯಿಲೆ ಎಂದು ನಿರ್ಮೂಲವಾಗುತ್ತೋ??**

★★★

ಮೆಟ್ರೋಗೆ ಹೆಚ್ಚುವರಿ ಭೂಮಿಗೆ ಸಿ.ಎಸ್.ಐ ಚರ್ಚ್ ವಿರೋಧ – ಪತ್ರಿಕೆ

**ಇದರ ಬಗ್ಗೆ ಚರ್ಚೆ ಆಗಲೇ ಬೇಕು??**

★★★

ಮಕ್ಕಳ ಪುಸ್ತಕಗಳು, ಅನುವಾದಿತ ಪದ್ಯಗಳ ಜೊತೆ ಮೂಲಪದ್ಯ ಹಾಕಲು ಒತ್ತಾಯ – ಸುದ್ದಿ

**ಹೌದು, ಅದೇ ಕ್ಷೇಮ!!**

★★★

ಇನ್ನೂ ಎರಡು ಕ್ಷಿಪಣಿ ಪರೀಕ್ಷೆ ನಡೆಸಿದ ಉತ್ತರ ಕೊರಿಯಾ – ಪತ್ರಿಕೆ

**ಕಿಂ ಅವರಿಗೆ ಟ್ರಂಪ್ ಒಲವು ತೋರಿದಂತಿದೆ!!**

# ನಮ್ಮ ನಿಮ್ಮಲ್ಲಿ

● ಶಿವಕುಮಾರ್

ಕಳೆದ ಎರಡು ತಿಂಗಳಲ್ಲಿ ನಡೆದ ದೇಣಿಗೆ ಸಂಗ್ರಹಣೆಯ ಕಾರ್ಯದ ದೆಸೆಯಿಂದ ನನಗಾದ ಒಂದು ಅನಿರೀಕ್ಷಿತ ಲಾಭವೆಂದರೆ ಅನೇಕ ಹಳೆಯ ಓದುಗರನ್ನು ಪುನಃ ಸಂಪರ್ಕಿಸಲು ಸಾಧ್ಯವಾದದ್ದು. ಹಲವರಂತೂ ಕೊರವಂಜಿಯ ಕಾಲದಿಂದಲೂ ನಮ್ಮ ಬಳಗದಲ್ಲಿದ್ದವರು. ಈ ಗುಂಪಿನಲ್ಲಿನ ಒಬ್ಬ ಅಪೂರ್ವ ಸಾಧಕರೆಂದರೆ ಕೃಷಿಕ ಹಾಗೂ ಸಾಹಿತಿ, ಮಣಿಕ್ಕಾರ ಗೋಪಾಲಕೃಷ್ಣ ಶ್ಯಾನುಭಾಗರು. ಬಹು ಹಿಂದೆ ತೊಂಭತ್ತರ ದಶಕದಲ್ಲಿ (ಆಗ ನನ್ನ ಮಗಳು ಮಣಿಪಾಲದಲ್ಲಿ ಓದುತ್ತಿದ್ದಳು) ನಾನು ಉಡುಪಿಗೆ ಹೋಗಿದ್ದಾಗ ಮಿತ್ರ ಗೋಪಾಲಭಟ್ಟರ ಜೊತೆ ಒಮ್ಮೆ ಶ್ಯಾನುಭಾಗರನ್ನು ಸುಹಾಸಂನಲ್ಲಿ ಭೇಟಿ ಮಾಡಿದ್ದು ನೆನಪಿನಲ್ಲಿದೆ. ಈಚೆಗೆ ಅವರು ನನ್ನನ್ನು ಸಂಪರ್ಕಿಸಿ ತಮ್ಮ ದೇಣಿಗೆಯ ಜೊತೆಗೆ ತಾವು ಬರೆದಿರುವ ಹಲವು ಪುಸ್ತಕಗಳನ್ನೂ ಕಳುಹಿಸಿದರು. ಈ ಪುಸ್ತಕಗಳ ವೈವಿಧ್ಯಮಯ ವಿಷಯಗಳೇ ಕೌತುಕ ಮೂಡಿಸುವಂತಹವು. ಹಿಂದಿನ ನೆನಪುಗಳನ್ನು ದಾಖಲಿಸುವ ''ನೆನಪುಗಳು'' ಮತ್ತು ''ಹಿನ್ನೋಟ'' ಇವುಗಳೇ ಅಲ್ಲದೆ ಅಮೆರಿಕಾ ಪ್ರವಾಸ ಕಥನ, ತಮ್ಮ ದಿವಂಗತ ಸಹಧರ್ಮಿಣಿಯವರ ಬಗ್ಗೆ ಬರೆದಿರುವ ಸಂಸ್ಮರಣೆ, ಭಾರತೀಯ ಸಂಗೀತ ಪರಂಪರೆಯ ಬಗ್ಗೆ ವಿಚಾರಾತ್ಮಕ ಲೇಖನಗಳ ಸಂಕಲನ, ಶ್ರೀವರ ಶ್ರೀಧರ ಸ್ವಾಮಿಗಳ ಬಗ್ಗೆ ಬಹು ಆಸಕ್ತಿ ಮೂಡಿಸುವಂತಹ ಕಿರು ಹೊತ್ತಗೆ ಇವೆಲ್ಲವನ್ನೂ ಬಹು ವಿಶ್ವಾಸದಿಂದ ಶ್ಯಾನುಭಾಗರು ನನಗೆ ಕಳುಹಿಸುವ ಕೃಪೆ ಮಾಡಿದರು.

ಎಲ್ಲ ಪುಸ್ತಕಗಳ ಮೇಲೂ ಕಣ್ಣಾಡಿಸಿ, ಅನಂತರ ''ನೆನಪುಗಳು'' ಮತ್ತು ''ಹಿನ್ನೋಟ'' ಪುಸ್ತಕಗಳನ್ನು ವಿವರವಾಗಿ ಓದಿದೆ. ನಲವತ್ತು ಐವತ್ತರ ದಶಕಗಳಲ್ಲಿನ ದಕ್ಷಿಣ ಕನ್ನಡದ ಚಿತ್ರಣವನ್ನು ಬಹು ಸೊಗಸಾಗಿ ಮೂಡಿಸಿರುವ ಪುಸ್ತಕಗಳು ಇವು. ಲೇಖಕರು ತಮ್ಮ ಮನೆಯ ಪರಿಸರವನ್ನು ಪರಿಚಯಿಸುವ ಶೈಲಿಯನ್ನು ಇಲ್ಲಿ ನೋಡಿ.

''ರಾಜರಸ್ತೆಯ ಬದಿಯಲ್ಲಿದ್ದು ಸದಾ ಹಸಿರಿನಿಂದ ಕಂಗೊಳಿಸುವ ಕಂಗು ತೆಂಗುಗಳ ತೋಟಗಳ ನಡುವೆ ಕೊಕ್ಕೋ ಗಿಡಗಳ ಲವಲವಿಕೆಯ ಚಿಗುರೊಡೆದ ಮರಗಳು, ಸದಾಕಾಲ ನೀರುಣಿಸುವ ಕೊಳವೆ ಬಾವಿಗಳು – ಎದುರಿಗಿರುವ ವಿಶಾಲವಾದ ಭತ್ತದ ಗದ್ದೆಯ ನಿತ್ಯಹರಿದ್ವರ್ಣ, ಹಿಂಬದಿಯ ಗೇರುಬೀಜದ ಹಾಡಿ, ಎತ್ತರದ ಗುಡ್ಡೆಯ ವಿಶಾಲ ದಿನ್ನೆಗಳು, ಎಡಬದಿಗೆ ಶ್ರೀ ವಿಷ್ಣುಮೂರ್ತಿ ದೇವಸ್ಥಾನ, ಬಲಬದಿಗೆ ನಮ್ಮ ಆರಾಧ್ಯ ದೈವಸ್ಥಾನ, ಪೂರ್ವಕ್ಕೆ ನಾಗಬನ ನಡುವಿನಲ್ಲಿ ರಾರಾಜಿಸುವುದೇ ನಮ್ಮ ಮೂಲಮನೆ– ''ಲಕ್ಷ್ಮೀನಾರಾಯಣ ಕೃಪಾ''.

ಈ ಮನೆಯನ್ನು 1893 ರಲ್ಲಿ ಲೇಖಕರ ಅಜ್ಜ ಶ್ರೀ ನಾರಾಯಣ ಶ್ಯಾನುಭಾಗರು ಕಟ್ಟಿಸಿದ್ದಂತೆ. ಇವರ ಮೂಲ ವಂಶಜರು ಸಾರಸ್ವತ ಬ್ರಾಹ್ಮಣರು. ಬಹು ಹಿಂದೆ ಗುಪ್ತಗಾಮಿಯಾದ ಸರಸ್ವತಿ ನದಿಯ ತೀರದಿಂದ ವಲಸೆ ಹೊರಟು ಗೋಮಾಂತಕ ಪ್ರದೇಶವನ್ನು ಸೇರಿ ಅಲ್ಲಿ ತಮ್ಮ ಶ್ರದ್ಧೆ ಪರಿಶ್ರಮಗಳಿಂದ ವ್ಯಾಪಾರ, ವಾಣಿಜ್ಯ ವ್ಯವಹಾರಗಳಲ್ಲಿ



ಬಹುವಾಗಿ ಯಶಸ್ಸನ್ನು ಗಳಿಸಿ ಉತ್ತಮ ಸ್ಥಾನಮಾನದ ಬದುಕನ್ನು ನಡೆಸುತ್ತಿದ್ದರಂತೆ. ಆಗ ಒಮ್ಮೆಲೇ ಪೋರ್ಚುಗೀಸರು ಈ ನೆಲವನ್ನು ಆಕ್ರಮಿಸಿದಾಗ, ಶಾಂತಿಪ್ರಿಯರಾದ ಈ ಜನ ದಿಕ್ಕೆಟ್ಟು ಕೈಗೆ ಸಿಕ್ಕ ಸಾಮಾನು ಸರಂಜಾಮು, ಕುಲದೇವರ ವಿಗ್ರಹ, ಚಿನ್ನಾಭರಣ ಇತ್ಯಾದಿಗಳೊಡಗೂಡಿ ಉತ್ತರ ಕನ್ನಡ, ಶಿವಮೊಗ್ಗ, ಸಾಗರ, ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆಯ ಇತರೆಲ್ಲಾ ಶಹರುಗಳು, ಹಾಗೂ ಕೇರಳದ ಕೊಚ್ಚಿವರೆಗಿನ ಕರಾವಳಿ ಪ್ರದೇಶಗಳಿಗೆ ವಲಸೆ ಬಂದರು. ಇಲ್ಲಿ ತಮ್ಮ ಕಾರ್ಯ ಕೌಶಲ್ಯತೆಯಿಂದ, ಸೃಜನ ಶೀಲತೆಯಿಂದ, ಹಿತಗರ್ವದಿಂದ ಹಾಗೂ ಜನಾನುರಾಗಗಳಿಂದಾಗಿ ಉತ್ತಮ ಪ್ರಜೆಗಳಾಗಿ ಬಾಳಿ ಬದುಕಿ ಸಂಪನ್ನರಾಗುವಂತಾಯಿತು. ಕಣ್ಣಿಗೆ ಕಟ್ಟುವಂತಹ ಇಂತಹ ವಿವರಣೆಗಳನ್ನು ಓದುತ್ತಿದ್ದಂತೆ ನನಗೆ ಮಾನ್ಯ ಗೋಪಾಲಕೃಷ್ಣ ಪೈ ಅವರು ಬರೆದಿರುವ ಸ್ವಪ್ನ ಸಾರಸ್ವತ ಪುಸ್ತಕದ ಓದು ನೆನಪಾಯಿತು.

ಈ ಪುಸ್ತಕದಲ್ಲಿ ಮೂಡಿಬಂದಿರುವ ನೆನಪಿನ ಪುಷ್ಪಗಳು ವೈವಿಧ್ಯಮಯ. ಭೂತದ ಕೋಲ, ಮೊದಲ ಕಾರು ಪಯಣ, ನಾಟಕ ವೀಕ್ಷಣೆ, ಕಾಲೇಜು ದಿನಗಳು ಇವೇ ಮೊದಲಾದ ಅನುಭವಗಳನ್ನು ಬಹು ಆಪ್ತವಾದ ಶೈಲಿಯಲ್ಲಿ ಶ್ಯಾನುಭಾಗರು ದಾಖಲಿಸುತ್ತಾ ಹೋಗುತ್ತಾರೆ. ಈ ಎಲ್ಲ ನೆನಪುಗಳ ಸಾಹಿತ್ಯಿಕ ಶ್ರೀಮಂತಿಕೆಯನ್ನು ಈ ಚಿಕ್ಕ ಪರಿಚಯಾತ್ಮಕ ಲೇಖನದಲ್ಲಿ ದಾಖಲಿಸುವುದು ಅಸಾಧ್ಯ. ಹಾಗಾಗಿ ಲೇಖಕರ ಚಿಕ್ಕಂದಿನ ದೃಷ್ಟಿ ತೆಗೆಯುವ ಪ್ರಸಂಗವೊಂದನ್ನು ಇಲ್ಲಿ ಉದ್ಧರಿಸಿರುವೆ.

**ದೃಷ್ಟಿ ತೆಗೆಯುವ ಕುಂಞ**

ನಾವೆಲ್ಲಾ ಅತ್ಯಂತ ಚಿಕ್ಕವರಾಗಿದ್ದಾಗ ನಮಗೆ ಬರುವ ಎಲ್ಲ ಚಿಕ್ಕಪುಟ್ಟ ಕಾಯಿಲೆಗಳಿಗೆ ''ದೃಷ್ಟಿ'' ತಾಗಿದೆ ಎಂಬ ಒಂದು ಹಾಗೂ ಒಂದೇ ಸೂತ್ರವು ರೋಗದ ಪತ್ತೆಯಾಗಿರುತ್ತಿತ್ತು. ಅದರಲ್ಲೂ ಎಲ್ಲಾ ಹೆಣ್ಣುಮಕ್ಕಳ ನಡುವೆ ಹುಟ್ಟಿದ ನನಗೆ ಈ ಹಣೆಪಟ್ಟಿ ಯಾವಾಗಲೂ

ಸಿದ್ಧವಿತ್ತು. ಹಾಗೆಯೇ ಅದಕ್ಕೆ ''ದೃಷ್ಟಿ'' ತೆಗೆಯುವ ಮಾಂತ್ರಿಕಳೊಬ್ಬಳಿದ್ದಳು. ಅವಳೇ ''ಕುಂಞ''.

ನೂಜಿಯ ಕುಂಞ ಎಂಬ ಈ ಮುದುಕಿಯನ್ನು ನಾನು ಕಂಡಾಗಲೇ ಅವಳಿಗೆ 70-75ರ ಪ್ರಾಯದ ಮುದುಕಿಯಾಗಿದ್ದಳು. ಬಾಗಿದ ದೇಹ - ಬಾಯಿ ತುಂಬಾ ತಾಂಬೂಲ - ಮಡಚಿ ಮಡಚಿ ನೋಡುವ ಕಣ್ಣುಗಳು - ನಡೆಯುವಾಗ ತಪ್ಪುವ ಹೆಜ್ಜೆ - ಒರಟು ಸೀರೆ - ಗಮುಟು ಸೀರೆ ಎಂದರೂ ಸರಿಯೇ - ಕೈಯ್ಯಲ್ಲಿ ಒಂದು ಕೋಲು - ಬೆತ್ತದ್ದು. ಮನೆಯ ಅಂಗಳಕ್ಕೆ ತಲುಪಿದ ಕೂಡಲೇ ಬಲಗೈಯನ್ನು ತನ್ನ ತಲೆಯ ಕೆಳಗೆ ಕಣ್ಣುಗಳ ಮೇಲೆ ಇಟ್ಟು ದೃಷ್ಟಿ ಕಿರಿದು ಮಾಡಿ ನೋಡಿ, - ಕರೆಯುವ ಅವಳ ಕರೆ ''ಏನ್ ಬತ್ತೆ... ದೇವರೇ...'' ಈಗಲೂ ನನ್ನ ಕಣ್ಣ ಮುಂದೆ ಕಾಣುವಂತಿದೆ.

ಬರುವಾಗ ತನ್ನ ಜತೆಗೆ ತನ್ನ ಮಕ್ಕಳ ಪೈಕಿ ಮೊಮ್ಮಕ್ಕಳ ಪೈಕಿ ಒಬ್ಬರನ್ನು ಕರೆ ತರುತ್ತಿದ್ದ ಅವಳು ಒಮ್ಮೆ ಕರೆತಂದವರನ್ನು ಪುನಃ ಅವರ ಸರದಿ ಬರುವವರೆಗೆ ಅಂದರೆ ತಿಂಗಳು ಎರಡು ತಿಂಗಳವರೆಗೆ ಕರಕೊಂಡು ಬರುತ್ತಿರಲಿಲ್ಲ. ಬಂದವಳೆ ''ಬಾಯಾರಿಕೆ'' ಕೇಳುತ್ತಿದ್ದಳು. ನಮ್ಮ ತಾಯಿಯ ಅಮೃತಹಸ್ತದ ಕಾಫಿ ತಿಂಡಿಯಾದ ಮೇಲೆ ನಡು ನಡುವೆ ತನ್ನೊಡನೆ ಬಂದ ಮಕ್ಕಳಿಗಾಗಬೇಕೆಂದು ಪುನಃ ಪುನಃ ತಿಂಡಿ ಪಡೆದು ತಾನು ತಿಂದು - ದೊಡ್ಡದಾಗಿ ತೇಗುತ್ತಾ ತನ್ನ ಬೊಚ್ಚು ಬಾಯಿಂದ ದೊಡ್ಡದಾಗಿ ನಗುತ್ತಾ ''ಇತ್ತೆ ಸರಿಯಾಂಡ್ ಅಮ್ಮಾ, ಈರೆನ ಕೈತ್ತ ತಿಂಡಿ ತಿನಂದೆ ಮಸ್ತ್ ಸಮಯಾಂಡ್ (ಅಮ್ಮಾ ಈಗ ಸರಿಯಾಯಿತು. ನಿಮ್ಮ ಕೈಯಿಂದ ತಿಂಡಿ ತಿನ್ನದೆ ತುಂಬಾ ಸಮಯವಾಯ್ತು) ಎಂದೆನ್ನುತ್ತಾ ಕಳೆದ ಎರಡು ದಿನಗಳ ಹಿಂದೆಯಷ್ಟೇ ಬಂದ ಅವಳು ಕೈ ತೊಳೆಯಲು ತೆರಳುವಾಗಲೇ ನನಗೆ ಗೊತ್ತಾಗುತ್ತಿತ್ತು ಇನ್ನು ಶುರುವಾಯಿತು ಗ್ರಹಚಾರ ಎಂದು.

ಅವಳು ಬರುವಾಗಲೇ ಕೆಲವು ಜಾತಿಯ ಸೊಪ್ಪಿನ ಕುಡಿಗಳ ಒಂದು ಸಣ್ಣ ಹಿಡಿಕೆಯನ್ನು ಮಾಡಿ ತರುತ್ತಿದ್ದಳು. (ನೆಕ್ಕಿ, ನೆಲ್ಲಿ, ಎಂಜಿರ, ಹುಣ್ಸೆ ಕುಡಿ, ಮಾವಿನ ಚಿಗುರು ಮುಂತಾದವುಗಳು) ಅದನ್ನು ತನ್ನ ಕಂಕುಳಿಂದ ಈಚೆಗೆ ತೆಗೆಯುವಾಗ, ಒಂದು ಹರಿವಾಣದಲ್ಲಿ ನನ್ನ ತಾಯಿಯವರು ಒಲೆಯಿಂದ ನಿಗಿ ನಿಗಿ ಕೆಂಡವನ್ನು ತುಂಬಿಸಿ ಅದರೊಂದಿಗೆ ಮುಷ್ಟಿ ತುಂಬಾ ಬೆಳ್ಳುಳ್ಳಿ-ಉಪ್ಪು, ಒಂದು ಮುಷ್ಟಿ ಮೆಣಸು ತಂದು ಅವಳ ಎದುರಿಗಿಡುತ್ತಿದ್ದರು. ಈಗ ನಮ್ಮ ಪೈಕಿ ''ದೃಷ್ಟಿ ದೋಷ'' ವಾದವರು ಒಬ್ಬೊಬ್ಬರಾಗಿ ಅವಳೆದುರು ಇಟ್ಟ ಈ ಹರಿವಾಣದ ಸುಡುವ ಕೆಂಡದ ಬೇಗೆಗೆ ಹತ್ತಿರವಾಗಿ ಇನ್ನೊಂದು ''ಮಣೆ'' (ಮರದ ಸಣ್ಣ ಪೀಠ)ಯ ಮೇಲೆ ಕುಳಿತುಕೊಳ್ಳಬೇಕು.

ಆಗ ಪ್ರಾರಂಭವಾಗುತ್ತದೆ ಅವಳ ಗುಪ್ತ ಮಂತ್ರೋಚ್ಚಾರಣೆ ಹಾಗೂ ನಮ್ಮ ತಲೆಗೆ ಆ ಸೊಪ್ಪಿನ ತುದಿಯಿಂದ ಸಣ್ಣಗೆ ಹೊಡೆಯುತ್ತಾ ''ಮಣ ಮಣ ಮಣ'' ಎಂಬ ಸಣ್ಣ ಸ್ವರದ ಮಾತುಗಳು! ನಡುನಡುವೆ ಬೆಳ್ಳುಳ್ಳಿಯನ್ನು ಮೆಣಸಿನ ತುಂಡಿನೊಂದಿಗೆ ಸಿಗಿದು ಕೆಂಡದ ಮೇಲೆ ಹೊಡೆಯುವಾಗ ''ದೃಷ್ಟಿ'' ದೋಷದವನಿಗೆ ಸೀನು ಬಂದಲ್ಲಿ ''ತೂಲೆ ಒಂತೊಂತೆ ಪೋಂಡು'' (ನೋಡಿ ಸ್ವಲ್ಪ ಸ್ವಲ್ಪ ಹೋಯಿತು) ಎಂದು ಹೇಳುತ್ತಿದ್ದ ಅವಳ ಮಾತು ತುಂಬಾ ತೀಕ್ಷ್ಣವಾಗಿರುತ್ತಿತ್ತು.

ಹಾಗೆ 5-10 ನಿಮಿಷ ಸೊಪ್ಪಿನ ತುದಿಯಿಂದ ಹೊಡೆದು ಮಣ ಮಣ ಮಾಡಿ ಮಂತ್ರವನ್ನು ನಿಲ್ಲಿಸಿ ''ಮಾಂತ ಪೊಂಡ್ - ಬಾಲೆಗ್ ಸೌಖ್ಯ ಆಂಡ್ (ಎಲ್ಲ ಹೋಯ್ತು.

ಮಗುವಿಗೆ ಸೌಖ್ಯವಾಯಿತು) ಎಂದು ಹೇಳಿ ಅದೇ ಹರಿವಾಣ ಕೆಂಡಕ್ಕೆ ಪುನಃ ಒಂದೆರಡು ಚಿಟಿಕೆ ಉಪ್ಪು ಹಾಕಿ – ಒಂದು ಮೆಣಸು ಅದು ಸಿಡಿಯುವಾಗ ''ನನ ಬರೊಡ್ಚಿ'' (ಇನ್ನು ಬರಬೇಡ) ಎಂದು ಆ ದೃಷ್ಟಿ ಭೂತವನ್ನು ಹೆದರಿಸಿ ''ಭೂ'' ಎಂದು ಮಂತ್ರ ಊದಿ ತನ್ನ ಬಲದ ಕೈಯಿಂದ ಅದರಲ್ಲಿದ್ದ ಬೂದಿಯನ್ನು ''ದೃಷ್ಟಿ'' ತಾಗಿದವನಿಗೆ ಹಣೆಗೆ ಹಾಕಿ ಕೆಲಸ ಮುಗಿಸುತ್ತಿದ್ದಳು.

ಈ ತೆರನಾದ ದೃಷ್ಟಿ ತೆಗೆಯುವ ಕಾರ್ಯ ಕನಿಷ್ಟ ನಾಲ್ಕು ಮಕ್ಕಳಿಗೆ ನಮ್ಮಲ್ಲಿ ಅವಳಿಗೆ ಖಾಯಂ ಇರುತ್ತಿತ್ತು. ಇದಕ್ಕೋಸ್ಕರ ಅವಳಿಗೆ ಎರಡು ಸೇರು ಅಕ್ಕಿ ತಲಾ 0–2–0 ಆಣೆ ದುಡ್ಡು, ಒಂದು ತೆಂಗಿನ ಕಾಯಿ (ಅದನ್ನು ರಾಶಿಯಿಂದ ಅವಳೇ ದೊಡ್ಡದು ನೋಡಿ ಹೆಕ್ಕುವುದು) ಒಂದು ಸೂಡಿ ವೀಳ್ಯದೆಲೆ, ಬಾಳೆ ಎಲೆ 10, ಪ್ರತಿಬಾರಿ ಅವಳು ಹರಕು ಸೀರೆಯೇ ಉಟ್ಟು ಬರುತ್ತಿರುವುದರಿಂದ ಒಂದು ಸೀರೆ, ತನ್ನ ಜೊತೆಗೆ ಬರುವ ಮಕ್ಕಳಿಗೆ ನಮ್ಮ ಪೈಕಿ ಯಾರದಾದರೂ ಹೆಣ್ಣುಮಕ್ಕಳ ಲಂಗ, (ಯಾವಾಗಲೂ ಅವಳು ಹೆಣ್ಣುಮಕ್ಕಳನ್ನೇ ತರುವುದು. ಬಟ್ಟೆ ಜಾಸ್ತಿ ಹರಿಯುವುದೇ ಅವರದಲ್ಲವೇ? ನಮ್ಮಲ್ಲಿ!) ಮಳೆಗಾಲದಲ್ಲಿಯಾದರೆ ಒಂದೆರಡು ''ಪೆಲಕ್ಕಾಯಿ'' (ಹಲಸಿನ ಹಣ್ಣು) ಇವುಗಳನ್ನು ಮಾತ್ರ ''ದೃಷ್ಟಿ'' ತಾಗದಂತೆ ವಸೂಲು ಮಾಡುತ್ತಿದ್ದಳು. 2 ದಿನಗಳಲ್ಲೇ ಪುನಃ ಹಾಜರಿ ಹಾಕಿ ನಮಗೆ ತಾಗದ ದೃಷ್ಟಿಯನ್ನು ತೆಗೆಯುತ್ತಿದ್ದಳು.

ಕೆಲ ಕಾಲಾನಂತರ ಅವಳ ದೇಹಾಂತ್ಯವಾದ ಸುದ್ದಿ ನಮಗೆ ತಲುಪಿತು. ಏನೇ ಮೌಢ್ಯವಿರಲಿ – ನಂಬಿಕೆ ಇರಲಿ ಇಲ್ಲದಿರಲಿ, ಆ ಕಾಲಕ್ಕನುಗುಣವಾಗಿ ಮಾಡುತ್ತಿದ್ದಂತಹ ಇಂತಹ ಸಣ್ಣಪುಟ್ಟ ಹಳ್ಳಿ ವೈದ್ಯಗಳೇ ನಮಗೆ ಶ್ರೀರಕ್ಷೆಗಳಾಗಿರುತ್ತಿದ್ದವು ಎಂಬುದು ಮಾತ್ರ ಸತ್ಯ.

★★

ಶ್ರೀಯುತ ಮಣಿಕ್ಕಾರ ಗೋಪಾಲಕೃಷ್ಣ ಶ್ಯಾನುಭಾಗರ ಲೇಖನಿಯಿಂದ ಮೌಲಿಕ ಸಾಹಿತ್ಯ ನಿರಂತರವಾಗಿ ಬರಲಿ ಎಂಬುದೇ ಅಪರಂಜಿಯ ಹಾರೈಕೆ. ■

## ದಾನಿಗಳು ಕಾಣೆಯಾಗಿದ್ದಾರೆ.!!

ಆಗಸ್ಟ್ ಏಳನೆಯ ತಾರೀಖಿನಂದು ನಮ್ಮ ಪತ್ರಿಕೆಯ ಬ್ಯಾಂಕ್ ಖಾತೆಗೆ ನೇರವಾಗಿ ಐದು ಸಾವಿರ ರೂಪಾಯಿಗಳನ್ನು ಜಮಾ ಮಾಡಿರುವ ಸಜ್ಜನ ದಾನಿಗಳು (ನೀವು ಕಳುಹಿಸಿರುವ ಹಣ ವರ್ಗಾವಣೆಯ ವಿವರ ಇಂತಿದೆ: IMPS RRN 921915240415) ಎಷ್ಟು ಸಂಕೋಚ ಸ್ವಭಾವದವರೆಂದರೆ ಅವರು ತಮ್ಮ ಹೆಸರು ವಿಳಾಸಗಳನ್ನು ನಮಗೂ ಸಹಾ ತಿಳಿಸಿಲ್ಲ. ಅವರು ಈಗ ಇದನ್ನು ಓದುತ್ತಿದ್ದರೆ ದಯವಿಟ್ಟು ತಮ್ಮ ಹೆಸರು ವಿಳಾಸಗಳನ್ನು ನಮಗೆ ತಿಳಿಸುವ ಕೃಪೆ ಮಾಡಬೇಕು. ಇದರಿಂದ ನಾವು ತಮಗೆ ರಸೀತಿ ಕಳುಹಿಸುವ ಕಾರ್ಯ ಸುಲಭವಾಗುತ್ತದೆ. ನಮ್ಮ ಈ ಮೇಲ್ ಐಡಿ: koravanjiaparanji@gmail.com

ನಿಮ್ಮ ಔದಾರ್ಯಕ್ಕೆ ಅಪರಂಜಿ ಋಣಿ.

# ಅಪರಂಜಿ ಬಳಗಕ್ಕೆ ಆಹ್ವಾನ

ಆತ್ಮೀಯ ಓದುಗರೇ

**ನಿಮ್ಮ ಬಂಧು ಬಳಗ ಕಡೇ ಪಕ್ಷ ಮುಂದಿನ ಹತ್ತು ವರ್ಷಗಳವರೆಗೆ ಪ್ರತಿ ತಿಂಗಳು ನಿಮ್ಮನ್ನು ಹೃದಯತುಂಬಿ ನೆನೆಸಿಕೊಳ್ಳುವಂಥಾ ಒಂದು ಸುವರ್ಣ ಅವಕಾಶ ನಿಮ್ಮ ಮುಂದಿದೆ.** ಅದು ಅಪರಂಜಿಯ ಓದುಗ ಬಳಗವನ್ನು ಹೆಚ್ಚಿಸುವುದು. ನೀವು ಮಾಡಬೇಕಾದುದಿಷ್ಟೆ. ನಿಮ್ಮ ಬಂಧುಗಳಿಗೆ / ಸ್ನೇಹಿತರಿಗೆ ನೀವು ಅಪರಂಜಿಯನ್ನು ಉಡುಗೊರೆಯಾಗಿ ಕೊಡಬಹುದು. **ಪ್ರತಿ ತಿಂಗಳು ಅಪರಂಜಿ ಅವರ ಮನೆಗೆ ಹೋದಾಗ ಅವರು ನಿಮ್ಮನ್ನು ಕೃತಜ್ಞತಾಭಾವದಿಂದ ನೆನೆಯುತ್ತಾರೆ.** ಅದಕ್ಕೆ ನೀವು ಈ ಕೆಳಗಿನ ಅರ್ಜಿಯನ್ನು ತುಂಬಿ ನಮಗೆ ಕಳಿಸಿದರೆ ಸಾಕು. ನಂತರದ ದಿನಗಳಲ್ಲಿ ಅಪರಂಜಿ ನಿಮ್ಮ ಬಂಧುಗಳ/ಸ್ನೇಹಿತರ ಮನೆಗೆ ಅಂಚೆಯಲ್ಲಿ ತಲಪುತ್ತದೆ. **ಪ್ರತಿ ಹೊಸ ಚಂದಾದಾರರಿಗೆ ಹತ್ತು ವರ್ಷದ ಚಂದಾ ರೂ. 750/– ರಂತೆ ಚೆಕ್/ಡಿಡಿ/ ಆನ್‌ಲೈನ್ ಮೂಲಕ ಕೊರವಂಜಿ ಕಾರ್ಯಾಲಯದ ವಿಳಾಸಕ್ಕೆ ಅಥವಾ ಸಂಪರ್ಕ ವಿಳಾಸಕ್ಕೆ ಅಥವಾ ಬ್ಯಾಂಕ್ ಮೂಲಕ ಸಲ್ಲಿಸಬಹುದು.** ಬ್ಯಾಂಕ್ ವಿವರಗಳನ್ನೂ ಕೊಟ್ಟಿದ್ದೇವೆ.

## ಅರ್ಜಿ ನಮೂನೆ

ಇವರಿಂದ : ಹೆಸರು.......................................................................

ಚಂದಾದಾರರ ಸಂಖ್ಯೆ.......................................................................

**ಉಡುಗೊರೆಯಾಗಿ ಅಪರಂಜಿಯನ್ನು ಪ್ರತಿ ತಿಂಗಳೂ ಈ ಕೆಳಕಂಡ ವಿಳಾಸಗಳಿಗೆ ತಲುಪಿಸಿ.**

1) ಹೆಸರು.......................................................................

ವಿಳಾಸ.......................................................................

ದೂರವಾಣಿ : ....................... ಈಮೈಲ್ ವಿಳಾಸ: ....................................

2) ಹೆಸರು.......................................................................

ವಿಳಾಸ.......................................................................

ದೂರವಾಣಿ : ....................... ಈಮೈಲ್ ವಿಳಾಸ: ....................................

| | |
|---|---|
| **Account Name** | : **KORAVANJI APARANJI TRUST** |
| **Account Number** | : 109804180000056 |
| **IFSC Code** | : SVCB0000098 |
| **Name of the Bank** | : SVC CO-OPERATIVE BANK LTD |
| **Branch Code /Name** | : MALLESHWARAM |
| **Account Type** | : CURRENT |

‘ಕೊರವಂಜಿ’ಯಿಂದ

# ಮಾಲಕ್ಷ್ಮಕ್ಕ ಶಾವಿಗೆ ಮಾಡಿದ್ದು

● ಅ.ರಾ.ಸೇ.

ರಾವಣ ಭಾತಿನ ರುಚಿಯನ್ನೇ ಬಯಸಿದ ತ್ರಿವೇಣಿಯವರಿಗೂ ಸಪ್ಪೆ ಶಾವಿಗೆ ಬಯಸಿದ ಮಾಲಕ್ಷ್ಮಕ್ಕನಿಗೂ ಹತ್ತಿರದ ಹೋಲಿಕೆಯಿದೆ. ಮಾಲಕ್ಷ್ಮಕ್ಕನಿಗೂ (ತ್ರಿವೇಣಿಯವರಂತೆ) ರಾಜಕೀಯದಲ್ಲಿ ಆಸಕ್ತಿ ಇಲ್ಲ, ಅವರಂತೆಯೇ ಇವಳಿಗೂ ಕೊರವಂಜಿಯನ್ನು ಓದಿದರೆ ನಗುಬರುವುದಿಲ್ಲ. ಆದರೆ ಮಾಲಕ್ಷ್ಮಕ್ಕ ಮನೋ ವಿಶ್ಲೇಕ್ಷಣಾತ್ಮಕ ಕಾದಂಬರಿ ಬರೆಯುವುದಿಲ್ಲವಲ್ಲ? ಎಂದರೆ ತ್ರಿವೇಣಿಯವರಿಗೆ ಮಾಲಕ್ಷ್ಮಕ್ಕನ ಹಾಗೆ ಶಾವಿಗೆ ಮಾಡುವುದಕ್ಕೆ ಬರುವುದಿಲ್ಲವಲ್ಲ,

ಮಾಲಕ್ಷ್ಮಕ್ಕ ಐವತ್ತು ಮೂರು ವರ್ಷದ ಮುತ್ತೈದೆ. ಅವಳ ಮಗ ಶೀನಣ್ಣ ನಮ್ಮೂರಿನಲ್ಲಿದ್ದಾನೆ. ವೆಂಕಪ್ಪ, ಮಾಲಕ್ಷ್ಮಕ್ಕ ಇರುವುದು ಚಿತ್ರದುರ್ಗದಲ್ಲಿ, ನವರಾತ್ರಿಗೆ ಶಾವಿಗೆ ಮಾಡಲು ಮಾಲಕ್ಷ್ಮಕ್ಕ, ಗಂಡನೊಡನೆ ಕಂಪಳಸಮೇತ ನಮ್ಮೂರಿಗೆ ಬಂದಳು. ಅವಳು ಶಾವಿಗೆ ಮಾಡಿದ್ದು ನಮ್ಮ ಮನೆಯಲ್ಲಿ, ಆ ಶಾವಿಗೆಯ ವೈಖರಿ ವರ್ಣಿಸುವ ಮೊದಲು ಅವಳು ಖಾರದ ಸಂಡಿಗೆ ಮಾಡಿದ ವಿಷಯ ಅತ್ಯಗತ್ಯವಾಗಿ ತಿಳಿಸಲೇಬೇಕು.

ಈಗ್ಗೆ ಮೂರು ತಿಂಗಳ ಕೆಳಗೆ ದುರ್ಗದಲ್ಲಿ ಯಾರೋ ವೆಂಕಪ್ಪನಿಗೆ ಒಂದು ಬೂದುಗುಂಬಳಕಾಯಿ ದಾನಕೊಟ್ಟರು. (ಅಂದ ಹಾಗೆ ವೆಂಕಪ್ಪ ಊರ ಪುರೋಹಿತ). ಮಾಲಕ್ಷ್ಮಕ್ಕ ತನ್ನ ಮಗನಿಗೆ ಹೇಳಿಕಳಿಸಿ ನಮ್ಮೂರಿನಿಂದ ನಾಲ್ಕುಸೇರು ಭತ್ತ ತರಿಸಿಕೊಂಡಳು. ಪಕ್ಕದ ಮನೆ ಹಿತ್ತಿಲಿನಲ್ಲಿ ಕೊತ್ತಂಬರಿಸೊಪ್ಪು ಕಿತ್ತುಕೊಂಡು ಬಂದಳು. ಸೆಟ್ಟರ ಅಂಗಡಿಗೆ ಹೋಗಿ ಇಂಗುಕೊಂಡು, ಜೀರಿಗೆ ಬೇಡಿಪಡೆದಳು. ಮತ್ತೆ ನಮ್ಮೂರಿಗೆ ಹೇಳಿಕಳಿಸಿ ಮೊಸರು ತರಿಸಿಕೊಂಡಳು. ಅರಳುಹುರಿದಳು. ಹುಳಿಮಜ್ಜಿಗೆಯಲ್ಲಿ ನೆನೆಹಾಕಿದಳು, ಪಕ್ಕದ ಮನೆಯವರ ಹಿತ್ತಿಲಿನಲ್ಲಿ ಎರಡು ಸೇರಿನಷ್ಟು ಹಸಿ ಮೆಣಸಿನಕಾಯಿ ಕಿತ್ತುಕೊಂಡು ಬಂದಳು. ಈಳಿಗೆಮಣೆ ಇಸುಕೊಂಡು ಬಂದು ಗಂಡನಿಂದ ಕುಂಬಳಕಾಯಿ ಒಡೆಸಿದಳು. ಗಂಡನಿಗೆ ಊಟಕ್ಕೆ ಹಾಕಿ, ಕುಂಬಳಕಾಯಿ ತಿರುಳನ್ನು ಹೆಸರುಕಾಳು ಗಾತ್ರಕ್ಕೆ ಹೆಚ್ಚುತ್ತಾ ಕುಳಿತಳು.

ಅದೆಲ್ಲಾ ಮುಗಿಸುವ ವೇಳೆಗೆ ಸಂಜೆ ರಾತ್ರಿ ಒಂಬತ್ತು ಗಂಟೆ! ಮಾಲಕ್ಷ್ಮಕ್ಕ ಹಾಗೇ! ಹುಲ್ಲೂರು ಹತ್ತುಗಂಟೆ ಎಂದರೆ ರಾತ್ರಿಯದು ಎಂದೇ ಅರ್ಥ. ಅವಳ ಮಗ ಶೀನಣ್ಣ ಪ್ರತಿದಿನವೂ ನಮ್ಮೂರಿನ ಶಿವನಿಗೆ ಪ್ರಾತಃಕಾಲದ ಪೂಜೆ ಮಾಡುವುದು ಮಧ್ಯಾಹ್ನ ಮೂರು ಗಂಟೆಗೆ ಇರಲಿ. ‘ರಾತ್ರಿಗೆ ಊಟವೇ ಇಲ್ಲ’ ಎಂದು ಮಾಲಕ್ಷ್ಮಕ್ಕ ನಿಟ್ಟುಸಿರು ಬಿಟ್ಟು ಕುಳಿತುಕೊಂಡಾಗ ವೆಂಕಪ್ಪ ರಾತ್ರಿಯ ಊಟಕ್ಕೆ ಬಂದುಕುಳಿತ. ಆಗ ಪಾತ್ರೆ ತೊಳೆದು ಅನ್ನಮಾಡಿ, ‘ನಾಳೆ ನಾನು ಸಂಡಿಗೆ ಮಾಡಬೇಕು ಈಗ ಸಾರಿಲ್ಲ’ ಎಂದು ಒಗ್ಗರಣೆ ಅನ್ನಹಾಕಿ ಗಂಡನ ಊಟ ಮುಗಿದ ಮೇಲೆ ಪಾತ್ರೆ ತೊಳೆದು, ರಾತ್ರಿಯ ಫಲಾಹಾರ ಎಂದು

ಅವಲಕ್ಕಿ ಒಗ್ಗರಣೆಗೆ ಹಾಕಿ ಅದನ್ನು ತಿಂದು, ಕಾಫಿಮಾಡಿ ಕುಡಿದು ಮಾಲಕ್ಷ್ಮಕ್ಕ ಮಲಗಿದಾಗ ಚರ್ಚಿನ ಗಂಟೆ ಎರಡು ಬಾರಿಸಿತ್ತು.

ಬೆಳಗ್ಗೆ ಎದ್ದು ಮೆಣಸಿನಕಾಯಿ, ಕೊತ್ತುಂಬರಿ, ಇಂಗು, ಜೀರಿಗೆಗಳನ್ನು ರುಬ್ಬಿ ಹರಳನ್ನು ಸೇರಿಸಿ ಎರಡು ಸುತ್ತು ಗುಂಡಾಡಿಸಿ, ಅದನ್ನು ಕುಂಬಳದ ತಿರುಳಿನೊಂದಿಗೆ ಹುಳಿಮಜ್ಜಿಗೆಯಲ್ಲಿ ಕಲಸಿ, ಮನೆ ಮಾಲಿಗೆಗೆ ಗಂಡನಿಂದ ಏಣಿ ಹಾಕಿಸಿ ಹತ್ತುವ ಹೊತ್ತಿಗೆ ಸರಿಯಾಗಿ ಆಕಾಶದಲ್ಲಿ ಕರೀ ಮೋಡಗಳು ಕಾಣಿಸಿಕೊಂಡವು. ಮಾಲಕ್ಷ್ಮಕ್ಕ ದುರ್ಗದ ಅಭಿಮಾನ ದೇವತೆ ಉಚ್ಚಂಗಮ್ಮನಿಗೆ ಹರಕೆ ಹೊತ್ತಳು. ''ನಮ್ಮವ್ವ, ಮಹತಾಯೀ ನಿನ್ನ ಕೃಪೆಯಿಂದ ಇನ್ನು ನಾಲ್ಕುದಿವಸ ಮಳೆ ಬರದಿದ್ದರೆ ನಿನ್ನ ಗುಡಿಯಲ್ಲಿ ಕುಂಕುಮಾರ್ಚನೆ ಮಾಡಿಸಿ, ಒಂದುವಾರ ತುಪ್ಪದ ದೀಪ ಹೊತ್ತಿಸುತ್ತೇನೆ.''

ಶ್ರೀ ಉಚ್ಚಂಗಮ್ಮ ದೇವತೆಯ ಆಫೀಸಿಗೆ ಆ ದಿನ ಸಾವಿರಾರು ಅರ್ಜಿ ಬಂದಿದ್ದವು. ಅವುಗಳಲ್ಲಿ 'ಮಹಾತಾಯೀ ಕೂಡಲೇ ಮಳೆ ಬರಿಸು' ಎಂದೇ ಶೇ|| 99 ಅಹವಾಲುಗಳ ಸಾರಾಂಶ. ಆದರೆ ಉಚ್ಚಂಗಮ್ಮ ಯೋಚಿಸಿದಳು 'ಮಳೆ ಬರದಿದ್ದರೂ ಚಿಂತೆಯಿಲ್ಲ, ಮಾಲಕ್ಷ್ಮಕ್ಕನ ಖಾರದ ಸಂಡಿಗೆ ಕೆಡಿಸಬಾರದು' ಎಂದು. ಮಳೆ ಬರಲಿಲ್ಲ. ಮಾಲಕ್ಷ್ಮಕ್ಕನ ಖಾರದ ಸಂಡಿಗೆ ರುಚಿ ರುಚಿಯಾಗಿ ಮಹಾ ಭಾರತದಂತೆ ನವರಸಯುಕ್ತವಾಗಿ ಒಣಗಿತು.

ಮೊನ್ನೆ ಮಾಲಕ್ಷ್ಮಕ್ಕ ಚಿತ್ರದುರ್ಗದಿಂದ ನಮ್ಮೂರಿಗೆ ಬಂದಳು. ಬಂದವಳು ನೆಟ್ಟಗೆ ಮಗನ ಮನೆಗೆ ಹೋಗಲಿಲ್ಲ. ನಮ್ಮ ಮನೆಗೆ ಬಂದು ''ಜಯ್ಯೂ, ಜಯ್ಯೂ'' ಎಂದು ನಮ್ಮಕ್ಕನನ್ನು ಕೂಗಿದಳು. ''ಇಲ್ನೋಡೇ, ಈ ಖಾರದ ಸಂಡಿಗೆ ಗಂಟು ತೆಗೆದಿಟ್ಟುಕೋ. ನನ್ನ ಸೊಸೆಗೆ ಹೇಳಬೇಡ'' ಎಂದಳು.

''ಬಾ ಮಾಲಕ್ಷ್ಮಕ್ಕ ಕುಂಕುಮ ಇಟ್ಟುಕೊಂಡು ಹೋಗು'' ಎಂದಳು ನಮ್ಮಕ್ಕ. ಮಾಲಕ್ಷ್ಮಕ್ಕ ಒಳಗೆ ಬಂದಳು. ನನ್ನನ್ನು ನೋಡಿ ''ಯಾವಾಗ ಬಂದ್ಯೋ ಏನು ನನ್ಮ್ಯಾಲೆ ಕತೇಗಿತೇ ಬರೀತೀತೋ?'' ಎಂದಳು. ನನ್ನ ಕತೆಗಳನ್ನು ಯಾರು ಮೆಚ್ಚದಿದ್ದರೂ ಮಾಲಕ್ಷ್ಮಕ್ಕ ಮೆಚ್ಚುತ್ತಾಳೆ. ಹಾಗೆಯೇ ನನ್ನ ಮೇಲೆ ಸಿಟ್ಟೂ ಅವಳಿಗಿದೆ. ನಾನು ಸುಮ್ಮನಿದ್ದೆ.

ಕುಂಕುಮ ಇಟ್ಟುಕೊಂಡ ಮಾಲಕ್ಷ್ಮಕ್ಕ ನಡುಮನೆಯಲ್ಲಿದ್ದ ಮೊರವನ್ನು ನೋಡಿ ''ಏನೇ ಅದೂ, ಶಾವಿಗೆ ರವೆಯೋ ಏನು?'' ಎಂದಳು. ''ಹೂಂ ಒಂದಷ್ಟೇರು ತರಿಸಿದ್ದೆ...'' ಎಂದು ನಮ್ಮಕ್ಕ ಹೇಳುತ್ತಿದ್ದ ಹಾಗೇ ''ನನಗೊಂದು ಪಾವಿನಷ್ಟು ಕೊಡ್ತಿಯಾ? ನಾಳೆ ಶಾವಿಗೆ ಮಾಡೋಣ ಅಂತ ಮನಸ್ಸಿನಲ್ಲಿ ಅಂದುಕೊಂಡೆ. ಅದಕ್ಕೆ ಸರಿಯಾಗಿ, ತಾನಾಗಿ ರವೆ ಸಿಕ್ಕಹಾಗಾಯಿತು.'' ಎಂದಳು ಮಾಲಕ್ಷ್ಮಕ್ಕ.

ಮರುದಿನ ಬೆಳಿಗ್ಗೆ 9 ಗಂಟೆ ಸುಮಾರಿಗೆ ಮಾಲಕ್ಷ್ಮಕ್ಕನ ಸ್ನಾನ ಆಯಿತು ಎಂಬ ಸುದ್ದಿ ನಮ್ಮ ಮನೆಗೆ ತಲುಪಿತು. ಸರಿ; ನಮ್ಮ ಮನೆ ನಡುಮನೆ ಕಸಗುಡಿಸಿ, ಬಟ್ಟೆಗಳನ್ನೆಲ್ಲಾ ಬೇರೆಕಡೆಗೆ ಮಡಿಸಿಟ್ಟು ಅಣಿಮಾಡಿದರು ಹತ್ತು ಗಂಟೆಗೆ ತೊಳೆದ ಒಂದು ಕಲ್ಗಡಿಗೆ, ಒಂದುವರೆಪಾವಕ್ಕಿ ತಪ್ಪಲೆ, ಟಿಫಿನ್ ಕ್ಯಾರಿಯರಿನಲ್ಲಿ ಮೊಸರು ಇವಿಷ್ಟನ್ನು ಮಾಲಕ್ಷ್ಮಕ್ಕನ ಮೊಮ್ಮಕ್ಕಳು ತಂದಿಟ್ಟರು. ''ನಮ್ಮಜ್ಜಿ ಹೇಳಿತು. ನಿಮ್ಮ ಬಚ್ಚಲು ಮನೆ ಸಾರಿಸಿ, ಇದ್ದಿಲೊಲೆ ತೊಳೆದಿಡಬೇಕಂತೆ ಎಂದು ಅವರು ಹೇಳಿದರು. ಹನ್ನೊಂದು ಗಂಟೆಗೆ ಸರಿಯಾಗಿ

ಮಾಲಕ್ಷ್ಮಕ್ಕನ ಮೊಮ್ಮಕ್ಕಳು ನಾಲ್ಕು ಬಾಲೆಯದೆಲೆ, ಎರಡು ಶಾವಿಗೆ ಕೋಲು ತಂದಿಟ್ಟರು. ಹನ್ನೊಂದುವರೆ ಗಂಟೆಗೆ ಮಾಲಕ್ಷ್ಮಕ್ಕನೇ ಬಂದಳು. ಇದ್ದಿಲೊಲೆ ಹೊತ್ತಿಸಿ, ಪಕ್ಕದ ಮನೆ ಸೀತಕ್ಕನ ಹತ್ತಿರ ಒಂದು ಪಾವು ಅಕ್ಕಿ, ಹುಣಿಸೆ ಹಣ್ಣು ತಂದಳು. ಅನ್ನಕ್ಕಿಟ್ಟು ಹುಣಿಸೆ ಹಣ್ಣು ನೆನೆಯಿಟ್ಟಳು. ನಮ್ಮ ಮನೆಯಲ್ಲಿ ಒಂದುಂಡೆ ಬೆಲ್ಲ ಒಂದು ಹಿಡಿ ಒಣ ಮೆಣಸಿನಕಾಯಿ ಕಡ ತೆಗೆದುಕೊಂಡಳು. ಸೀರೆ ಸೆರಗಿನ ತುದಿಗೆ ಕಟ್ಟಿದ್ದ ಜೀರಿಗೆ ತೆಗೆದಳು. ಇದಿರು ಮನೆಯಲ್ಲಿ ಒಂದು ಬಟ್ಟಲು ಸೇಂಗಾ ಎಣ್ಣೆ ತಂದಳು. ಅನ್ನ ಆದಮೇಲೆ ಇಳಿಸಿ ಬೆಲ್ಲಗೊಜ್ಜುಮಾಡಿ ಒಗ್ಗರಣೆ ಕೊಟ್ಟಳು. ''ಅಡಿಗೆ ಆಯ್ತು ಜಯ್ಯೂ, ನನ್ನ ಸಂಡಿಗೆ ಕೊಡು'' ಎಂದಳು. ಗರಿಗರಿಯಾಗಿ ಖಾರದ ಸಂಡಿಗೆ ಕರಿದು. ''ಅನ್ನ ಆಯ್ತು, ಬೆಲಗೊಜ್ಜು ಆಯ್ತು, ಒಂದಿಷ್ಟು ಒಗ್ಗರಣೆ ಇದು, ಕಾಯಿತುರಿ?'' ಎಂದು ಸ್ವಗತ ನಡೆಸಿದಳು. ಮನೆಗೆ ಹೋಗಿ ಒಂದು ಕಾಯಿ ತಂದು ಒಡೆದು ತುರಿದಳು. ಅದನ್ನು ಒಗ್ಗರಣೆ ಜೊತೆಗಿಟ್ಟಳು. ಉಳಿದ ಕಾಯಿ ತುರಿಯನ್ನೂ, ಉಳಿದ ಮೆಣಸಿನ ಕಾಯನ್ನೂ, ಹುರಿದು ಚಟ್ನಿ ರುಬ್ಬಿದಳು. ಅನ್ನದ ತಪ್ಪಲೆ ಮೇಲೆ ಬೆಲಗೊಜ್ಜಿನ ಕಲ್ಗಡಿಗೆ; ಅದರ ಮೇಲೆ ಸಂಡಿಗೆ ತಟ್ಟೆ, ಒಗ್ಗರಣೆ ಕಾಯ್ತುರಿ ತಟ್ಟೆ ಇಟ್ಟು, ಬಾಳೆಯೆಲೆ ಮುಚ್ಚಿ, ಚಟ್ನಿಯಿದ್ದ ತಟ್ಟೆಯನ್ನು ಅದರ ಮೇಲೆ ಹೇರಿದಳು. ಇದೆಲ್ಲವನ್ನು ಬಚ್ಚಲಮನೆಯಲ್ಲಿಟ್ಟು ಒಳಕ್ಕೆ ಅಡಿಗೆ ಮನೆಗೆ ಬಂದಳು. ಶಾವಿಗೆ ರವೆಕಲಸಿಟ್ಟಳು.

''ಜಯ್ಯೂ ಒಂದು ಬಟ್ಟಲು ತುಪ್ಪ ಕಡ ಕೊಡ್ತಿಯಾ?'' ಎಂದಳು. ನಮ್ಮಕ್ಕ 'ಇಲ್ಲ' ಎಂದಳು. 'ಶಾನುಭೋಗರ ಸೀತಕ್ಕನನ್ನಾದರೂ ಕೇಳುತ್ತೇನೆ. ಸಾಟಿಗೆ ಬೇಕು, ಮರ್ತೇಬಿಟ್ಟೆ' ಎಂದುಕೊಂಡಳು.

ನಮ್ಮ ಹಿತ್ತಿಲಿನಲ್ಲಿ ನಿಂತರೆ ಒಂದು ಅರ್ಧ ಫರ್ಲಾಂಗಿನಲ್ಲಿರುವ ಶಾನುಭೋಗರ ಮನೆ ಕಾಣುತ್ತದೆ. ನಮ್ಮ ಹಿತ್ತಿಲಿಗೆ ಕಾಣುವ ಭಾಗವನ್ನು ಶಾನುಭೋಗರು ಬಾಡಿಗೆಗೆ ಕೊಟ್ಟಿದ್ದಾರೆ.

ಮಾಲಕ್ಷ್ಮಕ್ಕ ''ಕಂಜಂಕ್ಷನ್ನೂ, ಕಂಜಂಕ್ಷನ್ನೂ'' ಎಂದು ಕೂಗಿದಳು. ಅಡಿಗೆ ಮನೆಯಲ್ಲಿದ್ದ ನನ್ನಾಕೆ ಓಡಿಬಂದು 'ರೀ, ರೀ ಮಾಲಕ್ಷ್ಮಕ್ಕ ಗ್ರಾಮರ್ ಓದ್ತಾ ಇದಾಳಲ್ರೀ'' ಎಂದಳು. ನಾನು ಗಾಬರಿಯಾಗಿ ಹಿತ್ತಿಲಿಗೆ ಹೋದೆ. ಮಾಲಕ್ಷ್ಮಕ್ಕ 'ಕಂಜಂಕ್ಷನ್ನೂ...'' ಎಂದು ಮತ್ತೆ ಕೂಗಿದಳು.

''ಇದೇನು ಮಾಲಕ್ಷ್ಮಕ್ಕ ಕಂಜಂಕ್ಷನ್ನು?'' ಎಂದೆ.

''ನೀನ್ಹೋಗೊ, ಏನಾದ್ರೆ ನಿನಗೇನು? ನನ್ಸುದ್ದಿ ಬರ್ಬೇಡ'' ಎಂದಳು. ಸ್ವಲ್ಪ ಹೊತ್ತಿನಲ್ಲಿ ಶಾನುಭೋಗರ ಔಟ್ ಹೌಸಿನಿಂದ ಹೆಣ್ಣು ಮಗಳೊಬ್ಬಳು ತಲೆ ಹಾಕಿದಳು. ನನ್ನಾಕೆ ನಗಲಾರಂಭಿಸಿದಳು. ''ಏನೇ ಅದೂ?'' ಎಂದೆ.

''ಅವ್ರೇ ಹೊಸದಾಗಿ ಬಂದಿದಾರಲ್ಲಾ ಈ ಊರಿಗೆ, ಕಂಜಾಕ್ಷಮ್ಮ!'' ಮಾಲಕ್ಷ್ಮಕ್ಕನಿಗೆ ಹೊಸಬರೇನು? ಹಳಬರೇನು? ಅವಳ ಮಗ ಊರಿನ ಪುರೋಹಿತನಲ್ಲವೇ?

''ಕಂಜಂಕ್ಷನ್ನೂ, ನಮ್ಮ ಸೀತಕ್ಕನ್ನ ಕೇಳಿ ಒಂದು ಬಟ್ಟಲು ತುಪ್ಪ ಕಳಿಸಿ ಕೊಡು'' ಎಂದಳು. ಅದು ಬರುವ ವಿಷಯದಲ್ಲಿ ಅವಳಿಗೆ ಸಂಶಯವೇ ಇಲ್ಲ, ಕಂಜಾಕ್ಷಮ್ಮನವರು

ಜೀವಮಾನದಲ್ಲೇ ಇಂಥ ಪ್ರಾಣಿಯನ್ನು ಕಂಡಿರಲಿಕ್ಕಿಲ್ಲ. ಕಂಡಿದ್ದರೋ ಬಿಟ್ಟಿದ್ದರೋ ಮಾಲಕ್ಷ್ಮಕ್ಕನಿಗೆ ತುಪ್ಪ ಬಂದು ಸೇರಿತು ಸರಿ!

ಮಾಲಕ್ಷ್ಮಕ್ಕ ಒಳಗೆ ಬಂದು ಕಣಕವನ್ನು ಕುಟ್ಟಿ, ಉಳ್ಳಿ ಮಾಡಿ ಇಟ್ಟಳು. ಒಂದು ಚಮಚ ಅಕ್ಕಿ ಹಿಟ್ಟು (ಕಡ ತೆಗೆದುಕೊಂಡದ್ದು); ತುಪ್ಪ ಎರಡನ್ನೂ ತೇದು ಸಾಟಿ ಮಾಡಿ, ಅದನ್ನು ಉಳ್ಳಿಗೆ ಹಚ್ಚಿ ಶಾವಿಗೆ ತೆಗೆಯಲಾರಂಭಸಿದಳು. ''ಎಷ್ಟು ಗಂಟೆಯಾಯಿತೇ ಜಯ್ಯೂ?'' ಎಂದು ಕೇಳಿದಳು. ನಮ್ಮಕ್ಕ ''ನಾಲ್ಕು ಗಂಟೆ'' ಎಂದಳು. ನನ್ನಾಕೆ ಮಧ್ಯಾಹ್ನದ ತಿಂಡಿ ಮಾಡಲಾರಂಭಿಸಿದ್ದಳು.

'ಉದ್ದಾಳೀಕನ ಕಥೆ' 'ಚಂದ್ರಹಾಸನ ಬಾಲ್ಯ' ಮೊದಲಾದ ಸಂಗತಿಯ ಹಾಡು ಹೇಳುತ್ತಾ ಮಾಲಕ್ಷ್ಮಕ್ಕ ಶಾವಿಗೆ ಮಾಡಿ ಮುಗಿಸಿದಳು. ಅಪರದಿಗ್ಭಾಗದಲ್ಲಿ ಸೂರ್ಯ ಮುಳುಗಿದ.

ಅತ್ತ ಚಿತ್ರದುರ್ಗದಲ್ಲಿ ಉಚ್ಚಂಗಮ್ಮನ ಆಫೀಸಿಗೆ, ಉಚ್ಚಂಗಮ್ಮನ ತಮ್ಮ ಮಹಾವಿಷ್ಣು ಬಂದ. ''ನೋಡೋ ನಾರಾಯಣ, ಜೋಯ್ಸರ ಮಹಾಲಕ್ಷ್ಮಿ ಹರಕೆ ಮಾಡಿಕೊಂಡದ್ದರಿಂದ, ನಾನು ಮಳೆ ನಿಲ್ಲಿಸಿದೆ. ಅವಳ ಸಂಡಿಗೆ ಒಣಗಿತು ಹರಕೆ ತೀರಸಲೇ ಬೇಡವೇ? ಹದಿನೈದು ದಿನ ಆಯಿತು'' ಎಂದು ಉಚ್ಚಂಗಮ್ಮ ಕೇಳಿದಳು. ''ಅಕ್ಕಾ, ನಿನ್ನ ಭಕ್ತಳ ಮಾತು ಕೇಳಿದ್ದರಿಂದ ಬರಬರುವ ಹಾಗಾಯಿತು. ರೈತರೆಲ್ಲಾ ತೇಲುಗುಡ್ಡೆಯಾಗಿದ್ದಾರೆ'' ಎಂದ ನಾರಾಯಣ. ''ನನ್ನ ಹರಕೆ?'' ಎಂದಳು ಉಚ್ಚಂಗಮ್ಮ. ''ಇರಲಕ್ಕಾ ಇನ್ನು ಐದು ನಿಮಿಷನಲ್ಲಿ ಸೇಡು ತೀರಿಸಿಕೊಂಡು ಬರುತ್ತೇನೆ'' ಎಂದ ತಮ್ಮ.

ಹೀಗಾಗಿ ಶ್ರೀ ಮಹಾವಿಷ್ಣುವಿನ ಪಾದಧೂಳಿ ನಮ್ಮ ಮನೆಯಲ್ಲಿ ಬಿತ್ತು. ಯಾವ ಮಾಯದಿಂದಲೋ ಏನೋ, ಒಂದು ನಾಯಿ ನಮ್ಮ ಕಣ್ಣೆದುರಿಗೆ ಹೊರ ಬಾಗಿಲಿಂದ ನುಗ್ಗಿ ಬಚ್ಚಲು ಮನೆಗೆ ಹೋಗಿ, ಸಂಡಿಗೆ ಬೆಲಗೊಜ್ಜು ಕೆಡವಿ, ಅನ್ನ ತಿಂದು ಮೊಸರು ಕುಡಿದು ಬಂದ ದಾರಿಯಲ್ಲೇ ಬಿಜಗೈದಿತು. ಏಕಾಗ್ರಚಿತ್ತಳಾಗಿ ಶಾವಿಗೆ ತೆಗಯುತ್ತಿದ್ದ ಮಾಲಕ್ಷ್ಮಕ್ಕ ಅದನ್ನು ನೋಡಲಿಲ್ಲ. ಯೋಗಃ ಕರ್ಮ ಸುಕೌಶಲಂ! ಅಲ್ಲವೇ. ಶಾವಿಗೆ ಮಾಡಿ ಮುಗಿಸಿದ ಮಾಲಕ್ಷ್ಮಕ್ಕ ಊಟಕ್ಕೆಂದು ಒಳಗೆ ಹೋಗಿ ನೋಡಿದಾಗ ಅವಳ ಮೇರುಕೃತಿ ಖಾರದ ಸಂಡಿಗೆ ಕೆಳಗೆ ಬಿದ್ದಿದೆ. ಬೆಲಗೊಜ್ಜು ನೆಲಕ್ಕೆ ಸೇರಿದೆ. ಅನ್ನ ಗಾಯಬ್!

ಗುಂಡಪ್ಪ ಅಷ್ಟರಲ್ಲಿ ಬಂದ. ''ಲೇ ಸೇತು, ಏನು ಎಚ್ಚರಾನೋ ನಿಮ್ಮದು. ಹಾಡೋ ಹಗಲಿನಲ್ಲಿನಾಯಿ ಮನೆಗೆ ನುಗ್ಗಿತ್ತಲ್ಲ!'' ಎಂದ. ಒಳಗೆ ಮಾಲಕ್ಷ್ಮಕ್ಕ ಇನ್ನೊಂದು ಪಾವು ಅಕ್ಕಿ ಕಡ ಪಡೆಯುತ್ತಿದ್ದಳು. ಅಷ್ಟು ಹೊತ್ತಿಗೆ ಹೆಂಡತಿಯ ಕೆಲಸ ಹೇಗೆ ನಡೆದಿದೆಯಂದು ನೋಡಲು ವೆಂಕಪ್ಪ ಬಂದ.

''ಅಲೇಲೇ ಮಾಲಕ್ಷ್ಮೀ ಆಗಲೇ ಶಾವಿಗೆ ಆಗಿಬಿಡ್ತೇ'' ಎಂದ. ''ಇದೇನೇ ಈಗ ಅನ್ನಕ್ಕಿಡ್ತಿ?'' ಎಂದು ಪ್ರಶ್ನಿಸಿದ.

''ಮಾಲಕ್ಷ್ಮಕ್ಕ, ರಾತ್ರಿ ಎಂಟು ಗಂಟೆ ಆಯಿತು. ಬೆಳಗಿನಿಂದ ಏನಾದರೂ ತಿಂದಿದ್ದೆಯೋ ಇಲ್ಲವೋ. ಒಂದಿಷ್ಟು ಅರಳಿಟ್ಟು ತಿಂದು ಆಮೇಲೆ ಅಡಿಗೆ ಮಾಡು'' ಎಂದು

ನಮ್ಮಕ್ಕ ಅರಳಿಟ್ಟು ಕಲಸಿಕೊಟ್ಟಳು.

''ಲೇ ಈಕಿ, ಇವೊತ್ತು ರಾತ್ರಿ ಏನು ಊಟ ಇದೆಯೋ ಇಲ್ಲವೋ'' ಎಂದು ನಾನು ನನ್ನಾಕೆಯ ಮೇಲೆ ಜೋರು ಮಾಡಿದೆ.

ನಾನು ಊಟ ಮಾಡಿ ಮಲಗಿದಾಗ, ಮಾಲಕ್ಷ್ಮಕ್ಕನ ಅನ್ನ ಕುದಿ ಹತ್ತಿತು. ಬೆಳಗಿನ ಜಾವ ಮೂರುವರೆ ಗಂಟೆಗೆ ಎಚ್ಚರವಾದಾಗ ಮಾಲಕ್ಷ್ಮಕ್ಕ ''ಜಯ್ಯೂ ಹೋಗಿ ಬರ್‍ತೀನಿ'' ಎಂದದ್ದು ಕೇಳಿಸಿತು. ಮಾಲಕ್ಷ್ಮಕ್ಕನ ಊಟವನ್ನು ವರ್ಣಿಸುವ ಗೋಜಿಗೆ ನನ್ನಂಥ ನರಮನುಷ್ಯರು ಹೋಗದಿರುವುದೇ ಒಳ್ಳೆಯದು.

ನನಗೂ ಸಹ ಈಗೀಗ 'ಕೊರವಂಜಿ' ಓದಿದಾಗ ನಗು ಬರುವುದಿಲ್ಲ. ನನಗೆ ನಗಬೇಕೆನ್ನಿಸಿದರೆ ಮಾಲಕ್ಷ್ಮಕ್ಕ ಶಾವಿಗೆ ಮಾಡಿದ ಕತೆ ನೆನೆಸಿಕೊಳ್ಳುತ್ತೇನೆ.

■

# ವಿಹಾರ

**ಸಂಪಟೂರು ವಿಶ್ವನಾಥ್**

– ಈ ವರ್ಷ ಸ್ವಲ್ಪ ದುಬಾರಿ ಹೋಟೆಲಿನಲ್ಲಿ ಇರಬೇಕು ಅನ್ಕೊಂಡಿದ್ದೀವಿ. ಮನೆಯಲ್ಲಿ ಚೆನ್ನಾಗಿರೋ ಟವಲುಗಳೇ ಇಲ್ಲವಾಗಿದೆ.

– ದಿನನಿತ್ಯದ ಜಂಜಾಟವನ್ನು ಮರೆಯಲು ದೂರಪ್ರಯಾಣ ಮಾಡುತ್ತಾರೆ. ಹಿಂದಿರುಗಿದ ಮೇಲೆ ತಮ್ಮ ಪೆಟ್ಟಿಗೆಗಳನ್ನು ಸರಿಪಡಿಸಿಕೊಳ್ಳುವಾಗ ಏನೇನು ಮರೆತಿದ್ದೀವಿ ಅನ್ನುವುದು ಖಚಿತ ಆಗತ್ತೆ.

– ಆರುವಾರ ಯುರೋಪಿನಲ್ಲೆಲ್ಲಾ ಸುತ್ತಾಡಿ ಬಾ ಅನ್ತಾರೆ ನನ್ನ ಸ್ನೇಹಿತರು. ಆಗ ನನ್ನ ಹೆಂಡತಿಯನ್ನ ಎಲ್ಲಿಗೆ ಕಳುಹಿಸಲಿ?

– ಒಂದು ಮತ್ತು ಎರಡನೆಯ ಮಹಾಯುದ್ಧದ ಸಮಯದಲ್ಲಿ ಸೈನಿಕರು ಮಾತ್ರ ಹೋಗುತ್ತಿದ್ದ ಸ್ಥಳಗಳಿಗೆ ಇಂದು, ಶ್ರೀಮಂತರು ವಿಹಾರಕ್ಕಾಗಿ ಹೋಗುತ್ತಾರೆ.

– ಹಿಂದಿನ ವರ್ಷ, ನಾನು ನನ್ನ ಹೆಂಡತಿ ವಿಭಿನ್ನ ರೀತಿಯಲ್ಲಿ ರಜಾ ದಿನಗಳನ್ನು ಕಳೆದವು. ನಾನು ಅಟ್ಟಗಳನ್ನು ಶುದ್ಧಮಾಡಿದೆ, ನನ್ನ ಹೆಂಡತಿ ಕಾರು ಸೈಕಲ್ಲುಗಳಿರುವ ಷೆಡ್ಡ್‌ನ್ನು ಸ್ವಚ್ಛಮಾಡಿದಳು.

# ಅರಮನೆಯ ಸ್ವಾರಸ್ಯಗಳು

● **ಸುಕೇಶವ**

**18.7.1919 ರಲ್ಲಿ ಜನಿಸಿದ ಮೈಸೂರಿನ ಅಂದಿನ ಮಹಾರಾಜರಾಗಿದ್ದ ಶ್ರೀ ಜಯಚಾಮರಾಜ ಒಡೆಯರ್ ಅವರ ಜನ್ಮಶತಾಬ್ದಿ ವರ್ಷ ಇದು. ತನ್ನಿಮಿತ್ತ ಅರಮನೆಯಲ್ಲಿ ಮಹಾರಾಜರ ದೈನಂದಿನ ಜೀವನದಲ್ಲಿ ನಡೆದ ಕೆಲವು ಸ್ವಾರಸ್ಯ ಘಟನೆಗಳು ಬಹಳ ಮುದ ಕೊಡುತ್ತವೆ.**

## ಅರಮನೆಯಲ್ಲಿ ಸಮಯ ಪರಿಪಾಲನೆ

ಅರಮನೆಯಲ್ಲಿ ಸಮಯ ಪರಿಪಾಲನೆ ಬಹಳ ಮುಖ್ಯವಾದುದು. ಮಹಾರಾಜರು ಶಿಕಾರಿಗೆ ಹೋಗುವ ದಿನ ಬೆಳಗಿನ ಐದು ಗಂಟೆಗೇ ಪೂಜೆಗೆ ಕೂರುತ್ತಿದ್ದರು. ಮಹಾರಾಜರು ಪೂಜೆಗೆ ಕೂರುವಾಗ ಸಂಗೀತಗಾರರು ಹಾಜರಿರಲೇಬೇಕು. ಅದಕ್ಕೇ ಮಹಾರಾಜರ ಕಾರ್ಯದರ್ಶಿಯವರು ಮಹಾರಾಜರು ನಾಲ್ಕೂವರೆಗೆ ಪೂಜೆಗೆ ಕೂರುತ್ತಾರೆ. ಸಂಗೀತಗಾರರು ಹಾಜರಿರಬೇಕು ಎಂದು ದರ್ಬಾರ್ ಭಕ್ಷಿಯವರಿಗೆ ಹೇಳುತ್ತಿದ್ದರು. ದರ್ಬಾರ್ ಭಕ್ಷಿಯವರು ಇನ್ನೊಂದು ಅರ್ಧ ಗಂಟೆ ಮುಂಚೆಯೇ ಇರಲಿ ಎಂದು ಎಲ್ಲ ಸಂಗೀತಗಾರರೂ ಬೆಳಗ್ಗೆ ನಾಲ್ಕು ಗಂಟೆಗೇ ಹಾಜರಿರತಕ್ಕದ್ದು ಎಂದು ಕಛೇರಿಯ ಮೊಕ್ತೇಸರರಿಗೆ ಮೆಮೋ ಕಳಿಸುತ್ತಿದ್ದರು. ಮೊಕ್ತೇಸರರು ಯಾರದ್ರೀ ನಾಳೆ ಶಿವಪೂಜೆ ಡ್ಯೂಟಿ. ಸಂಗೀತಗಾರರನ್ನು ಬೆಳಗ್ಗೆ ಮೂರೂವರೆಗೆ ಅರಮನೆಯಲ್ಲಿ ಹಾಜರಿರತಕ್ಕದ್ದು ಎಂದು ಎಲ್ಲರಿಗೂ ಹರಿಕಾರರಿಗೆ ಹೇಳುತ್ತಿದ್ದರು. ಹರಿಕಾರರು ನನ್ನ ಗಂಟೇನು ಹೋಗಬೇಕು ಸಂಗೀತಗಾರರು ಮೂರು ಗಂಟೆಗೇ ಹಾಜರಿರುವಂತೆ ಹೇಳುತ್ತೇನೆ ಎಂದು ಹೊರಡುತ್ತಿದ್ದರು. ಈ ವಿಷಯ ತಿಳಿದ ಸಂಗೀತಗಾರರು ಅರಮನೆಯ ಕೆಲಸ ಹೇಗಾದರೂ ಆಗಲಿ ಎಂದು ಬೆಳಗಿನ ಎರಡೂವರೆ ಗಂಟೆಗೇ ಹಾಜರಿರುತ್ತಿದ್ದರು. ಆದರೆ ಎರಡೂವರೆಯಿಂದ ಐದು ಗಂಟೆಯವರೆವಿಗೂ ಕಾಯುವ ಕರ್ಮ ಅವರದಾಗಿರುತ್ತಿತ್ತು. ಆದರೆ ಈ ಸಂಕಟವನ್ನು ಯಾರಲ್ಲಿ ಹೇಳಿಕೊಳ್ಳುವುದು ಎಂದು ಸುಮ್ಮನಿರುತ್ತಿದ್ದರು. ಆದರೆ ಈ ವಿಷಯ ಹೇಗೋ ಮಹಾರಾಜರ ಕಿವಿಗೆ ತಲುಪಿ, ಸಂಗೀತ ವಿದ್ವಾಂಸರಿಗೆ ತೊಂದರೆ ಕೊಡಬೇಡಿ, ಅವರು ಪೂಜೆಯ ವೇಳೆಗೆ ಬಂದರೆ ಸಾಕು ಎಂದು ತಿಳಿಸಿದರು.

## ಸಂಗೀತ ಕಲಾನಿಧಿ

ಮಹಾರಾಜರಿಗೆ ಸಾಹಿತ್ಯ, ಸಂಗೀತ ಇವುಗಳಲ್ಲಿ ಅಪಾರ ಆಸಕ್ತಿ. ಸ್ವತ: ಅನೇಕ ವಾದ್ಯಗಳನ್ನು ನುಡಿಸುವುದರ ಜೊತೆಗೆ ಅವರು ಅನೇಕ ಕೀರ್ತನೆಗಳನ್ನು ರಚಿಸಿದ್ದಾರೆ. ಅವುಗಳನ್ನು ಅನೇಕ ಸಂಗೀತಗಾರರು ಕಛೇರಿಗಳಲ್ಲಿ ಹಾಡಿ ಭರ್ಜರಿ ಚಪ್ಪಾಳೆಗಳನ್ನು ಗಳಿಸಿದ್ದಾರೆ. ಒಂದು ಸಾರಿ ಮಲ್ಲೇಶ್ವರಂ ಸಂಗೀತ ಸಭೆಯಲ್ಲಿ ಶೆಮ್ಮಂಗುಡಿಯವರ ಗಾಯನ. ಮಹಾರಾಜರು ರಚಿಸಿದ ಶಿವ ಶಿವ ಶಿವ ಭೋ ಮಹಾದೇವ ಎನ್ನುವ ಕೀರ್ತನೆಯನ್ನು ಅದ್ಭುತವಾಗಿ ಹಾಡಿದರು. ಯಾರದ್ದು ಈ ಕೀರ್ತನೆ ಎನ್ನುವ ಕುತೂಹಲ ಸಭಿಕರಲ್ಲಿ. ಶೆಮ್ಮಂಗುಡಿಯವರು ನಿಮ್ಮ ಮಹಾರಾಜರೇ ಕರುಣಿಸಿದ ಭಾಗ್ಯ ವಿಶೇಷ ಈ ಕೀರ್ತನೆ ಎಂದಾಗ ಮತ್ತೊಮ್ಮೆ ಸುದೀರ್ಘ ಚಪ್ಪಾಳೆ ಕೇಳಿಬಂದಿತು. 1945ರಲ್ಲಿ ಮೊದಲು ಒಂದು ಕೀರ್ತನೆ ರಚಿಸಿದ ಮಹಾರಾಜರು ನಂತರ

ನಿರಂತರವಾಗಿ ಕೀರ್ತನೆಗಳನ್ನು ರಚಿಸುತ್ತಾ ಬಂದು ಸುಮಾರು 2 ವರ್ಷ 4 ತಿಂಗಳ ಅವಧಿಯಲ್ಲಿ ಸುಮಾರು 94 ಕೃತಿಗಳನ್ನು ರಚಿಸಿದ್ದಾರೆ. ಇವುಗಳಲ್ಲಿ ಬಹಳ ಮುಖ್ಯವಾದುದು ಮೊದಲು ರಚಿಸಿದ ಶ್ರೀ ಮಹಾಗಣಪತಿಂ ಭಜೇಹಂ ಮತ್ತು ಕಡೆಗೆ ರಚಿಸಿದ ಶ್ರೀ ರಂಗನಾಥ ಪಾಹಿಮಾಂ ಕೃಪಾಲಯ ಎಂಬ ಕೃತಿಗಳು. ಅನೇಕ ಸಂಗೀತಗಾರರು ಮಹಾರಾಜರ ಕೃತಿಗಳನ್ನು ಅವರ ಕಛೇರಿಗಳಲ್ಲಿ ಹಾಡಿ ಯಶಸ್ವಿಗೊಳಿಸಿದ್ದಾರೆ.

## ದೈವ ಭಕ್ತಿ

ಮಹಾರಾಜರಿಗೆ ಜನಸಾಮಾನ್ಯರಂತೆಯೇ ದೇವರಲ್ಲಿ ಅನನ್ಯ ಭಕ್ತಿ. ಅರಮನೆಯಲ್ಲಿ ನಿಯಮಿತವಾಗಿ ನಡೆಯುವ ಪೂಜೆಯ ಜೊತೆಗೆ ಮಹಾರಾಜರು ಹೊರಗಡೆ ದೇವಸ್ಥಾನಗಳಿಗೆ ಹೋದಾಗ ಅನನ್ಯ ಭಕ್ತಿಯಿಂದ ಪೂಜೆ ಸಲ್ಲಿಸುತ್ತಿದ್ದರು. ಒಮ್ಮೆ ಅವರು ಪುರಿ ಜಗನ್ನಾಥನ ದರ್ಶನಕ್ಕೆ ಹೋಗಿದ್ದಾರೆ. ಆಗ ಮಳೆಗಾಲ. ನೆಲ್ಲವೆಲ್ಲಾ ಕೊಚ್ಚೆಮಯ. ಜಗನ್ನಾಥನ ದರ್ಶನಕ್ಕೆಂದು ಬಂದಿದ್ದ ಸಹಸ್ರಾರು ಜನರ ನಡೆದಾಟದಿಂದ ನೆಲದಲ್ಲಿ ಕೊಚ್ಚೆ ಸುರಿದಿತ್ತು. ದೇವಸ್ಥಾನಕ್ಕೆ ಹೋದಾಗ ದೀರ್ಘದಂಡ ನಮಸ್ಕಾರ ಮಾಡುವುದು ಪರಿಪಾಠ. ಈ ಕೊಚ್ಚೆಯಲ್ಲಿ ದೀರ್ಘದಂಡ ನಮಸ್ಕಾರ ಮಾಡುವುದು ಹೇಗೆ ಎಂದು ಅರಮನೆಯ ಪರಿವಾರದವರು ಹಿಂದು ಮುಂದು ನೋಡುತ್ತಿದ್ದರೆ, ಮಹಾರಾಜರು ಕೊಚ್ಚೆಯನ್ನೂ ಲೆಕ್ಕಿಸದೇ, ಉಟ್ಟಿರುವ ಪೀತಾಂಬರ ಕೊಚ್ಚೆಯಾಗುತ್ತದೆ ಎನ್ನುವ ಅಳುಕೂ ಇಲ್ಲದೇ ಆ ಕೊಚ್ಚೆಯಲ್ಲೇ ದೀರ್ಘದಂಡ ನಮಸ್ಕಾರ ಮಾಡಿದರು. ಆಗ ಅರಮನೆಯ ಪರಿವಾರದವರೂ ಮಹಾರಾಜರನ್ನು ಅನುಸರಿಸೋದು ಅನಿವಾರ್ಯವಾಯಿತು. ಹೀಗೆ ಮಹಾರಾಜರು ತಾವು ಮಾಡಿದ್ದನ್ನು ಇತರರು ಅನುಸರಿಸುವಂತೆ ಮಾಡುತ್ತಿದ್ದರು.

## ಗ್ರಂಥ ಪ್ರೀತಿ

ಅರಮನೆ0ಯ ಗ್ರಂಥಾಲಯದಲ್ಲಿ ಅನೇಕ ಮಹತ್ವದ ಕೃತಿಗಳನ್ನು ಮಹಾರಾಜರು ಸಂಗ್ರಹಿಸಿಟ್ಟಿದ್ದರು. ಅವರು ಎಲ್ಲಿಗೇ ಹೋಗಲಿ ಉತ್ತಮ ಪುಸ್ತಕಗಳನ್ನು ಆರಿಸಿ ತರುತ್ತಿದ್ದರು. ಅವರು ಮದರಾಸು, ಕಲ್ಕತ್ತ, ಬೊಂಬಾಯಿ, ಕಾಶಿ, ಮುಂತಾದ ಕಡೆಗಳಿಗೆ ಹೋದಾಗ ಗ್ರಂಥಾಲಯಗಳಿಗೆ ಹೋಗೋದನ್ನು ಮರೆಯುತ್ತಿರಲಿಲ್ಲ. ಒಮ್ಮೆ ಅವರು ಬೊಂಬಾಯಿಗೆ ಹೋದಾಗ ಖೇಮರಾಜ್ ಅನ್ನುವ ಪ್ರೆಸ್‌ಗೆ ಹೋಗಿದ್ದರು. ಅಲ್ಲಿಯೇ ಮಹತ್ವದ ಗ್ರಂಥಗಳು ಮುದ್ರಣಗೊಳ್ಳುತ್ತಿದ್ದುದು. ಅಲ್ಲಿಗೆ ಹೋದಾಗ ತಮಗೆ ಅವಶ್ಯಕತೆಯಿದ್ದ ಯಾವುದೇ ಬೃಹತ್ ಗ್ರಂಥದ ಬಗೆಗೆ ವಿಚಾರಿಸಿದರು. ಅಲ್ಲಿನ ಸಿಬ್ಬಂದಿ ಇವರು ಮಹಾರಾಜರು ಎನ್ನುವುದನ್ನು ಅರಿಯದೇ, ಅಂಥಾ ಅಮೂಲ್ಯ ಗ್ರಂಥಗಳು ಯಾವುದೇ ಇದ್ದರೂ ಅವು ಮಹಾರಾಜರ ಸ್ವತ್ತು. ಅವು ನಿಮ್ಮಂತವರಿಗೆ ದೊರೆಯುವಂಥದಲ್ಲ ಎಂದನು. ಹತ್ತಿರವಿದ್ದ ಜನರು ಇವರೇ ಮಹಾರಾಜರು ಎಂದಾಗ ಸಿಬ್ಬಂದಿ ಮುಖ ಬಿಳುಚಿಕೊಂಡು ಕ್ಷಮಾಪಣೆ ಕೇಳಿದ.

## ಅರಮನೆಯಲ್ಲಿ ಕಟ್ಟಳೆಗಳು

ಅರಮನೆಯಲ್ಲಿ ಪ್ರತಿಯೊಂದಕ್ಕೂ ಸಂಪ್ರದಾಯ, ಶಿಸ್ತು, ನಿಯಮ ಇವುಗಳೆಲ್ಲ ಇವೆ. ಎಲ್ಲವೂ ಅದೇ ಪ್ರಕಾರದಿಂದಲೇ ನಡೆಯಬೇಕು. ಒಮ್ಮೆ ಮಹಾರಾಜರಿಗೆ ಮಾಸ್ಟರ್ ಹಿರಣ್ಣಯ್ಯನವರ ನಾಟಕ ನೋಡಬೇಕೆನಿಸಿತು. ಸರಿ ಅರಮನೆಯಿಂದ

ಹಿರಣ್ಣಯ್ಯನವರಿಗೆ ಕರೆ ಹೋಯಿತು. ಅರಮನೆಯ ಪದ್ಧತಿಯಂತೆ ಅರಮನೆಯಲ್ಲಿ ನಾಟಕವಾಡಲು ಇರುವ ನಿಬಂಧನೆಗಳ ಪಟ್ಟಿಯನ್ನು ಕಳಿಸಿದರು. ಅದನ್ನು ನೋಡಿದ ಹಿರಣ್ಣಯ್ಯನವರು ಕಲಾವಿದ ಸರ್ವತಂತ್ರ ಸ್ವತಂತ್ರನು, ಸಕಲ ಸೀಮಾತೀತನು, ಪ್ರತಿಸ್ಪಂದನ, ಪ್ರತಿಕ್ರಿಯೆಗಳಿಗೆ ಶ್ರಮಿಸುವವನು. ಅದೇ ಇಲ್ಲದಾಗ ಪ್ರದರ್ಶನಕ್ಕೆ ಬದಲಾಗಿ ಆಗುವುದು ಅವನ ಅಂತ್ಯಕ್ರಿಯೆ. ಕಲಾವಿದ ಎಂದೂ ಕಟ್ಟಿ ಮೇಯಿಸಿದ ಕುರಿಯಲ್ಲ, ಬಿಟ್ಟು ಬೆಳೆದ ವನರಾಜ ಎಂಬುದನ್ನು ಸ್ವತ: ಕಲಾವಿದರಾದ ನಿಮಗೆ ಹೇಳಿಕೊಡಬೇಕಾಗಿಲ್ಲ ಎಂದು ನಯವಾಗಿ ಆಹ್ವಾನವನ್ನು ನಿರಾಕರಿಸಿದರು. ಕೆಲವು ದಿನ ಕಳೆದ ಮೇಲೆ ಅರಮನೆಯ ಭಕ್ಷಿಯವರನ್ನು ಮಹಾರಾಜರು ಹಿರಣ್ಣಯ್ಯನವರ ನಾಟಕ ಏನಾಯಿತು ಅಂತ ಕೇಳಿದಾಗ ಭಕ್ಷಿಯವರು ನಡೆದ ವಿಚಾರ ತಿಳಿಸಿದಾಗ ಮಹಾರಾಜರು ಯಾಕ್ರೀ ಯಾವುದೋ ಓಬೀರಾಯನ ಕಾಲದಲ್ಲಿ ಮಾಡಿದ ನಿಬಂಧನೆಗಳನ್ನು ಅವರಿಗೆ ಹೇಳಿದಿರಿ. ಹೋಗಿ ಅವರಿಗೆ ಹೇಳಿ ಯಾವ ನಿಬಂಧನೆಗಳೂ ಇಲ್ಲ, ನೀವು ಹೊರಗೆ ಹೇಗೆ ನಾಟಕ ಅಭಿನಯಿಸುತ್ತೀರೋ ಹಾಗೇ ಅರಮನೆಯಲ್ಲೂ ಅಭಿನಯಿಸಬಹುದಂತೆ ಎಂದರು. ನಂತರ ಲಂಚಾವತಾರದಿಂದ ಪ್ರಾರಂಭವಾಗಿ ಒಟ್ಟು ಹದಿನಾಲ್ಕು ನಾಟಕಗಳು ಅರಮನೆಯಲ್ಲಿ ಅಭಿನಯವಾಗಿ ಅವುಗಳನ್ನೆಲ್ಲಾ ಮಹಾರಾಜರು ನೋಡಿ ಇಡೀ ತಂಡವನ್ನು ಪ್ರಶಂಶಿಸಿದರು.

## ಜನರ ರಾಜ

ಅವರು ಮಹಾರಾಜರಾದರೂ ಸಾಮಾನ್ಯರಲ್ಲಿ ಸಾಮಾನ್ಯರಂತೆಯೇ ಇದ್ದವರು. ಕಾಲೇಜಿಗೆ ಹೋಗುವಾಗಲೂ, ಅಲ್ಲಿ ವಿದ್ಯಾರ್ಥಿಯಾಗಿರುವಾಗಲೂ ತಾವು ಮಹಾರಾಜರು ಎನ್ನುವ ಗತ್ತನ್ನು ಎಂದೂ ತೋರಿಸಿಕೊಂಡವರಲ್ಲ. ಒಮ್ಮೆ ಅವರಿಗೆ ಕನ್ನಡದಲ್ಲಿ ಅತ್ಯಂತ ಕಡಿಮೆ ಅಂಕ ಬಂದಿತ್ತು. ಉತ್ತರ ಪತ್ರಿಕೆಗಳ ಮೌಲ್ಯಮಾಪನ ಮಾಡುತ್ತಿದ್ದವರು ಕುವೆಂಪು. ಸರಿ ಕುವೆಂಪು ಅವರನ್ನೇ ಅರಮನೆಗೆ ಕರೆಸಿ ಮಹಾರಾಜರಿಗೆ ಕನ್ನಡ ಪಾಠವನ್ನು ಹೇಳಿಸೋಣವೆಂದು ಕೃಷ್ಣರಾಜ ಒಡೆಯರು ಕುವೆಂಪು ಅವರಿಗೆ ಹೇಳಿಕಳಿಸಿದರು. ಆದರೆ ಕುವೆಂಪು ಅವರು ಅರಮನೆಗೆ ಹೋಗುವುದನ್ನು ನಯವಾಗಿಯೇ ನಿರಾಕರಿಸಿದ್ದರು. ಈ ವಿಚಾರಗಳೆಲ್ಲವೂ ಮಹಾರಾಜರಿಗೆ ಗೊತ್ತು. ಸರಿ ಮಹಾರಾಜರೇ ಕುವೆಂಪು ಅವರ ಬಳಿಗೆ ಹೋಗಿ ಪಾಠ ಹೇಳಿಸಿಕೊಳ್ಳುವುದು ಎಂದಾಯಿತು. ಕುವೆಂಪು ಅವರು ತಮ್ಮ ಕೋಣೆಗೆ ಬರುವ ಮೊದಲೇ ಮಹಾರಾಜರು ಅಲ್ಲಿ ಹಾಜರಿರುತ್ತಿದ್ದರು. ಕುವೆಂಪು ಅವರು ಬಂದೊಡನೆ ಸಾಮಾನ್ಯ ವಿದ್ಯಾರ್ಥಿಯಂತೆ ಎದ್ದು ನಿಂತು ಕೈ ಮುಗಿದು ನಮಸ್ಕರಿಸುತ್ತಿದ್ದರು. ಮಹಾರಾಜರ ನಡೆ ನುಡಿಗಳಲ್ಲಿ ಸದಾ ಲವಲವಿಕೆಗಳು ಇರುತ್ತಿದ್ದವೇ ಹೊರತು ಅಹಂಕಾರ ಅವರ ಹತ್ತಿರಕ್ಕೂ ಸುಳಿಯುತ್ತಿರಲಿಲ್ಲ. ಯದುವಂಶದ ಎಲ್ಲ ರಾಜರ ಶಕ್ತಿ ಮತ್ತು ಗುಣಗಳೂ ಅವರಲ್ಲಿ ಮೂರ್ತೀಭವಿಸಿದಂತಿತ್ತು. ಅವರ ವಿದ್ವತ್ತನ್ನು ಮೆಚ್ಚಿಕೊಂಡಿದ್ದ ಅನೇಕ ಶಿಕ್ಷಣ ಸಂಸ್ಥೆಗಳು ಅವರನ್ನು ವಿಶೇಷ ಉಪನ್ಯಾಸಕ್ಕಾಗಿ ಆಹ್ವಾನಿಸುತ್ತಿದ್ದವು. ನಿರಂತರ ಅಧ್ಯಯನದಿಂದ ಅವರೊಬ್ಬರು ಶ್ರೇಷ್ಠ ವಿದ್ವಾಂಸರಾಗಿದ್ದೇ ಅಲ್ಲದೇ ಮಹಾಪುರುಷರೂ ಆಗಿದ್ದರೆಂಬುದನ್ನು ಜನ ನೆನಪು ಮಾಡಿಕೊಳ್ಳುತ್ತಾರೆ.

ಎಲ್ಲ ಕಲೆಗಳನ್ನೂ ಸಮಾನವಾಗಿ ಪ್ರೀತಿಸಿ, ಸ್ವೀಕರಿಸಿ, ಬೆಂಬಲಿಸುವುದು ಮಹಾರಾಜರ ಆದ್ಯ ಕರ್ತವ್ಯಗಳಲ್ಲೊಂದಾಗಿತ್ತು. ಇನ್ನೊಮ್ಮೆ ಜಗನ್ಮೋಹನ ಅರಮನೆಯಲ್ಲಿ ಎಂ.ಆರ್.

ಶ್ರೀ ಅವರ ಧರ್ಮ ದುರಂತ ನಾಟಕ ಪ್ರದರ್ಶನವಾಗಿತ್ತು. ಅದಕ್ಕೆ ಮಹಾರಾಜರು ಬಂದಿದ್ದರು. ಅದರಲ್ಲಿ ಪುಟ್ಟಸ್ವಾಮಿ ಎನ್ನುವವರದು ಟಿಪ್ಪುಸುಲ್ತಾನನ ಪಾತ್ರ. ಪುಟ್ಟಸ್ವಾಮಿಯವರಿಗೆ ತಲೆತುಂಬ ಗುಂಗರು ಕೂದಲು. ಆದರೆ ನಾಟಕ್ಕಾಗಿ ತಲೆ ಬೋಳಿಸಿಕೊಳ್ಳಲೇ ಬೇಕಾಗಿತ್ತು. ನಾಟಕ ತುಂಬಾ ಚನ್ನಾಗಿ ಬಂತು. ಮಹಾರಾಜರು ಹೊರಡುವಾಗ ಎಲ್ಲ ಕಲಾವಿದರನ್ನೂ ಪ್ರಶಂಶಿಸಿ ವಿಶೇಷವಾಗಿ ಪುಟ್ಟಸ್ವಾಮಿಯವರಿಗೆ ನಾಟಕ ತುಂಬಾ ಚನ್ನಾಗಿತ್ತು. ನೀವು ಟಿಪ್ಪು ಪಾತ್ರ ಸಹಜವಾಗಿರಲಿ ಎಂದು ತಲೆಗೂದಲನ್ನೇ ಬೋಳಿಸಿಕೊಂಡಿರಲ್ಲ ಮುಂದೆ ನಿಮ್ಮ ತಲೆಗೂದಲು ಬೆಳೆಯೋವರೆಗೂ ಮ್ಯಾನೇಜ್ ಮಾಡೋದು ಕಷ್ಟ ಅಲ್ಲವೇ ಅಂತ ಕೇಳಿದರು. ಅದಕ್ಕೆ ಪುಟ್ಟಸ್ವಾಮಿ ಅವರು ಇಲ್ಲ ಮಹಾಸ್ವಾಮಿ ನಾನು ತಲೆ ಬೋಳಿಸಿಕೊಂಡಿಲ್ಲ, ವೀರ್ ಎನ್ನುವ ಮೇಕಪ್ ಮ್ಯಾನ್ ಅವರು ಮಾಡಿರುವ ಕೈ ಚಳಕ ಎಂದಾಗ ಮಹಾರಾಜರು ಹೌದಾ ಎಂದು ಅಚ್ಚರಿಪಟ್ಟರು.

ಇಂದಿನ ದಿನಗಳಲ್ಲಿ ಮಂತ್ರಿ ಮಹೋದಯರು ಪ್ರಮಾಣವಚನ ಸ್ವೀಕರಿಸುವುದನ್ನು ನಾವು ಕೇಳಿದ್ದೇವೆ. ಆದರೆ ಅವರು ಹೇಳೋದೊಂದು ಮಾಡೋದೊಂದು ಎನ್ನುವಂತಿರುತ್ತದೆ ಆ ಪ್ರಮಾಣ ವಚನಗಳು. ಆದರೆ ಮಹಾರಾಜ ಜಯಚಾಮರಾಜ ಒಡೆಯರ್ ಅವರು ಪಟ್ಟಾಭಿಷಿಕ್ತರಾದ ನಂತರದ ಮೈಸೂರು ರಾಜ್ಯದ ಜನತೆಯನ್ನು ಉದ್ದೇಶಿಸಿ ಕೊಟ್ಟ ಮೊದಲ ಸಂದೇಶ ಹೀಗಿದೆ. ನಾನು ನನ್ನ ಹಿರಿಯರ ಸಿಂಹಾಸನವನ್ನೇರುತ್ತಿರುವ ಈ ವ್ರತ ಸಮಾರಂಭವನ್ನು, ನನ್ನನ್ನೂ, ನನ್ನ ಜೀವಮಾನವನ್ನೂ ನನ್ನ ಸಕಲ ಸರ್ವಸ್ವವನ್ನೂ ಮೈಸೂರು ಸಂಸ್ಥಾನದ ಜನರ ಸೇವೆಗಾಗಿ ಸಮರ್ಪಣ ದೀಕ್ಷೆಯೆಂಬುದಾಗಿ ಎಣಿಸುತ್ತೇನೆ. ಇದರಲ್ಲಿ ನನ್ನೊಬ್ಬನ ಪ್ರಯತ್ನವೊಂದೇ ಜಯಶಾಲಿಯಾಗಲಾರದೆಂದು ನಾನು ಚನ್ನಾಗಿ ಅರಿತಿದ್ದೇನೆ. ನಿಮ್ಮ ನೆರವು, ನಿಮ್ಮ ಸಹಕಾರ, ನಿಮ್ಮ ನಂಬಿಕೆ, ನಿಮ್ಮ ಪ್ರೇಮ ನನಗೆ ಬೇಕು ಎಂದಿದ್ದರು. ಅವರ ಅಂದಿನ ಸಂದೇಶ ನಾಡಿನ ಜನರ ಮನಸ್ಸನ್ನು ಗೆದ್ದಿದ್ದಂತೂ ಸತ್ಯ.

ಮುಂದೆ ಮೈಸೂರು ರಾಜ್ಯವು ಕರ್ನಾಟಕ ಎಂದು ಮರುನಾಮಕರಣಗೊಂಡಾಗ ಅವರು " ಕನ್ನಡನಾಡಿನ ಸಿಂಹಾಸನವನ್ನು ತ್ಯಾಗ ಮಾಡಿ ಅದನ್ನು ನನ್ನ ಪ್ರೀತಿಯ ಜನರ ಹೃದಯಕ್ಕೆ ವರ್ಗಾಯಿಸಿದ್ದೇನೆ. ಅದನ್ನು ಕಾಪಾಡಿಕೊಂಡು ಬರುವ ಹೊಣೆ ನಿಮ್ಮದು ಎಂದು ಸಂದೇಶ ಕಳಿಸಿದರು. ಇದನ್ನು ಕೇಳಿದ ಕುವೆಂಪು ಅವರು ಎಲ್ಲರೂ ಸಿಂಹಾಸನವನ್ನೇರಿ ಮಹಾರಾಜರಾದರೆ ಇವರು ಸಿಂಹಾಸನವನ್ನಿಳಿದು ಮಹಾರಾಜರಾಗಿದ್ದಾರೆ ಎಂದಿದ್ದು ಅಕ್ಷರಶ: ನಿಜ.

ಒಮ್ಮೆ ಜಯಚಾಮರಾಜ ಒಡೆಯರು ಶೃಂಗೇರಿ ಮತ್ತು ಚಿಕ್ಕಮಗಳೂರಿಗೆ ಭೇಟಿ ಕೊಟ್ಟಿದ್ದಾಗ ಅಲ್ಲಿನ ಜನರಿಂದ ಅವರಿಗೆ ಭವ್ಯ ಸ್ವಾಗತ ದೊರೆಯಿತು. ಅದರಿಂದ ಪುಳಕಿತರಾದ ಅವರು ಭಾರತ ಸರ್ಕಾರ ನನ್ನ ರಾಜತ್ವ ಕಿತ್ತುಕೊಂಡಿರಬಹುದು. ಆದರೆ ನಿಮ್ಮೆಲ್ಲರ ಮನದಲ್ಲಿ ನಾನಿನ್ನೂ ಮಹಾರಾಜನಾಗಿಯೇ ಉಳಿದಿದ್ದೇನೆ, ನನಗೆ ಇಷ್ಟು ಸಾಕು ಎಂದಿದ್ದರು.

■

TEMPLE OF KNOWLEDGE

# BEECHI VIDYA KENDRA

Email: admin@beechi.in
Web: www.beechi.in
Mob: 9740968677, 9035302302, 9035007003

PLACEMENT SERVICES FOR:

- BFSI
- SOFTWARE
- MANUFACTURING
- AUTOMOBILES
- REAL ESTATE
- HOSPITALITY
- FMCG




**Civil Contractors for Complete Construction Activities**

Mob: 9740968677

● **ದಂನಆ**

- ✓ ಮಳೆಗಾಗಿ ಪೂಜೆ ಮಾಡುತ್ತಾರೆ. ಆದರೆ ಮಳೆ ನಿಲ್ಲಿಸಲು ಪೂಜೆ ಏಕಿಲ್ಲ?
- ✓ ಗೌರಿಗೇನು ಗೊತ್ತು ಗಂಡಸರ ದುಃಖ?
- ✓ ಕಾಂಗ್ರೆಸ್ ನ್ಯೂ ಲೀಡರ್ ಈಸ್ ಓಲ್ಡ್ ಒನ್.
- ✓ ಸಂಗೀತ ಕಚೇರಿ ಎಂದರೆ ಅದೊಂದು ತರಹ ಊಟದ ಕತೆ. ಕೆಲವರಿಗೆ ಅಡುಗೆ ಮಾಡಲು ಚೆನ್ನಾಗಿ ಬರುತ್ತದೆ ಆದರೆ ಬಡಿಸಲು ಬರದು. ಅಡುಗೆ ಮಾಡಲು ಬಂದರೆ ಸಾಲದು. ಚೆನ್ನಾಗಿ ಬಡಿಸಲು ಬರಬೇಕು. ಆಗ ಊಟಕ್ಕೆ ಒಂದು ಅಂದ. ಅಡುಗೆ ಮಾಡಿದವನಿಗೂ ತೃಪ್ತಿ.
- ✓ ಅಮ್ಮಂದಿರು ನೂರಾರು ಕವಿತೆಗಳನ್ನು ಬಾಳುತ್ತಾರೆ. ಆದರೆ ಒಂದನ್ನೂ ಬರೆಯುವುದಿಲ್ಲ.
- ✓ ಟು ಫೈಂಡ್ ಗಾಡ್ಸ್ ಗ್ಲೋರಿ ಇನ್ ಕಾಂನ್‌ಸೆಂಟ್ರೇಡ್ ಫಾರ್ಮ್ ಯು ಹ್ಯಾವ್ ಟು ಗೊ ಟು ದಿ ಟೆಂಪಲ್.
- ✓ ಏನು! ಚುನಾವಣೆಗೆ ಮೊದಲು ನಾನು ಮಾಡಿದ ಯಾವ ಆಶ್ವಾಸನೆಗಳೂ ಈಡೇರಿಲ್ಲವೆ? ಸ್ವಲ್ಪ ತಡೆಯಿರಿ. ನಾನು ಮತ್ತೆ ಆಯ್ಕೆಯಾದ ಮೇಲೆ ಅದರ ಬಗ್ಗೆ ಪರಿಶೀಲಿಸುತ್ತೇನೆ.
- ✓ ಈಗ ಮಕ್ಕಳು ಪಾಪ್ ಮಾಮ್ ಬದಲು ಆ್ಯಪ್‌ಗಳಿಂದಲೇ ಸಲಹೆ ಸೂಚನೆಗಳನ್ನು ಪಡೆದುಕೊಳ್ಳುತ್ತಾರೆ.
- ✓ ಟೂ ಮೆನಿ ಪೀಪಲ್ ಸ್ಪೆಂಡ್ ಮನಿ ದೆ ಹ್ಯಾವ್ ನೆವರ್ ಅರ್ನ್‌ಡ್, ಟು ಬಯ್ ಥಿಂಗ್ಸ್ ದೆ ಡೋಂಟ್ ನೀಡ್ ಅಂಡ್ ಟು ಇಂಪ್ರೆಸ್ ಪೀಪಲ್ ದೆ ಡೋಂಟ್ ಲೈಕ್.
- ✓ ಜನಗಳ ಹೆಸರಿನಲ್ಲಿ ನಡೆಯುವ ಕೆಲಸಗಳು ನಮ್ಮ ಹೆಸರಿನಲ್ಲಿ, ನಮ್ಮ ಪ್ರತಿಯೊಬ್ಬರ ಹೆಸರಿನಲ್ಲಿ, ನಡೆಯುತ್ತದೆ, ನಮಗೆ ಇಷ್ಟವಿರಲಿ ಬಿಡಲಿ.
- ✓ ಯೋಗ ಹೆಲ್ಪ್ಸ್ ಎಂಡ್ಯೂರ್ ವಾಟ್ ಕೆನಾಟ್ ಬಿ ಕ್ಯೂರಡ್ ಅಂಡ್ ಕ್ಯೂರ್ ವಾಟ್ ಕೆನಾಟ್ ಬಿ ಎಂಡ್ಯೂರ್ಡ್.
- ✓ ಜಾಹೀರಾತಿನಲ್ಲಿ ಕಾಣುವ ರೂಪದರ್ಶಿಗಳು ಸಹ ನಿಜ ಜೀವನದಲ್ಲೂ ಹಾಗೆಯೇ ಕಾಣಲು ಬಯಸುತ್ತಾರೆ.
- ✓ ಇಂದಿನ ಬದುಕಿನಲ್ಲಿ ಅನೇಕ ದ್ರೌಪದಿಗಳಿದ್ದು ಅವರ ಸ್ಥಿತಿ ಇನ್ನಷ್ಟು ಭಯಂಕರವಾಗಿದೆ. ಆ ದ್ರೌಪದಿಗೆ ರಕ್ಷಣೆ ಕೊಡಲು ಕೃಷ್ಣ ಇದ್ದ. ಇವರಿಗೆ ಯಾರೂ ಇಲ್ಲ.

■


ಪುರಾಣದ ನವ್ಯ ಕಥೆಗಳು.
ಕಚ - ದೇವಯಾನಿ
ಸಂಜೀವಿನಿ ವಿದ್ಯೆಯನ್ನು ಕಲಿಯಲು ದೇವಗುರು ಪುತ್ರ ಕಚ ವಿದ್ಯಾರ್ಥಿಯಾಗಿ ಅಸುರಗುರುಗಳಾದ ಶುಕ್ರಾಚಾರ್ಯರಲ್ಲಿಗೆ ಬರುತ್ತಾನೆ.
ದೇವಯಾನಿ ಗುರುಪುತ್ರಿ.
ಮುಂದೆ ಓದಿ........
ನನಗೊಂದು ಸೀಟ್ ಬೇಕು
ಯಾವ ಕಾಂಬಿನೇಷನ್?
ಪಿ.ಸಿ.ಎಂ.ಬಿ ಬೇಡ ಸಂ.ಜೀ.ವಿ.ನಿ.ಕೊಡಿ
ಡೊನೇಷನ್ ಕೊಡ್ತಾನಾ ಕೇಳಪ್ಪ
ಕ್ರಮೇಣಾ ಕಚ ದೇವಯಾನಿಯರ ಮಧ್ಯೆ ಪ್ರೇಮ ಉದ್ಭವಿಸಿತು
ನೀವು ಕಂಗನಾ ಥರಾ ಕಾಣ್ತೀರಾ !
ಅಕ್ಷಯ್ ಕುಮಾರ್ ನಿಮ್ಮ ಸಂಬಂಧೀಕರೇನು ?
ರಾಕ್ಷಸರು ಇದನ್ನು ಸಹಿಸದೇ ಕಚನನ್ನು ಕೊಂದು ತುಂಡು ಮಾಡಿ ನಾಯಿಗೆ ಹಾಕಿದರು. ದೇವಯಾನಿಯ ಆಕ್ರಂದನ ಕೇಳಲಾಗದೇ ಶುಕ್ರಾಚಾರ್ಯರು ಸಂಜೀವಿನಿ ಪ್ರಯೋಗಿಸಿದರು. ಕಚ ನಾಯಿಯನ್ನು ಸೀಳಿಕೊಂಡು ಹೊರಬಂದ
ಕಚಾ ಬಾ !
ಇಗೋ ಬಂದೆ ಗುರುಗಳೇ !
ಅಯ್ಯೋ ! ನನ್ನ ಮುದ್ದಿನ ಟಾಮಿ !
ಪುಟ 22ಕ್ಕೆ ತಿರುಗಿಸಿ.

prayag Discovery Village

DISCOVERY VILLAGE
NANDI HILLS VALLEY
HILL WILD OFFICE

# ನಂದಿಬೆಟ್ಟದ ತಪ್ಪಲಿನಲ್ಲೊಂದು ಮರೆಯಲಾಗದ ಅನುಭವ!

(ವಿಮಾನ ನಿಲ್ದಾಣದಿಂದ ಕೇವಲ 25 ನಿಮಿಷಗಳ ಡ್ರೈವ್)




(ನಿರ್ವಾಹಕ ಸಿಬ್ಬಂದಿ ಸಹಿತ.)
ಈಜುಕೊಳ ಮತ್ತು
ಅನೇಕ ಚಟುವಟಿಕೆಗಳು
ಟೀಂ ಔಟಿಂಗ್
ಫ್ಯಾಮಿಲಿ ಫನ್
ಕಾರ್ಪೊರೇಟ್
ವೈಲ್ಡ್ ಲೈಫ್
ಅಡ್ವೆಂಚರ್

ಮದುವೆ ಕಾರ್ಯಕ್ರಮ

ಅಜಿನಮೋಟೊ, ಟ್ರಾನ್ಸ್ ಫ್ಯಾಟ್ ರಹಿತ ಆಹಾರ.
(ಖಾದ್ಯ ಎಣ್ಣೆ ಬಳಕೆ ಒಂದೇ ಕರಿಯುವಿಕೆಗೆ ಮಾತ್ರ)
ಪರಿಸರ ರಕ್ಷಣೆಗಾಗಿ ಪ್ಲಾಸ್ಟಿಕ್ ಬಳಕೆಯ ನಿಷೇಧ.


Wild Adventure
Wild Games Room
ನಂದಿ ಬೆಟ್ಟದ ತಪ್ಪಲಿನಲ್ಲಿ, ಅತಿ ರಮ್ಯ
ನಂದಿ ಕಣಿವೆಯ ಮಡಿಲಿನಲ್ಲಿರುವ
'ಡಿಸ್ಕವರಿ ವಿಲೇಜ್' ಬೆಂಗಳೂರಿನ
ಸಮೀಪದಲ್ಲೇ ಇದ್ದು, ಇದು ಪರಿಸರ
ಪ್ರೇಮಿಗಳ ನೆಚ್ಚಿನ ರಿಸಾರ್ಟ್.
ನಿಮಗಾಗಿಯೇ ನಿಮ್ಮ ಸದಭಿರುಚಿಗೆ
ತಕ್ಕಂತೆ ವಿವಿಧ ಮನೋರಂಜನಾ
ಕ್ರೀಡೆಗಳು, ಇನ್ಫಿನಿಟಿ ಈಜುಕೊಳ, ವಿವಿಧ
ಹಂತಗಳ ಟ್ರೆಕಿಂಗ್, ಜಂಗಲ್ ಸಫಾರಿ,
ನೇಚರ್ ವಾಕ್, ಚಿಣ್ಣರಿಗಾಗಿ
ಪ್ರಯೋಗಾತ್ಮಕ ಕ್ರೀಡೆಗಳು ಮತ್ತು
ಇನ್ನೂ ಅನೇಕ ಚಟುವಟಿಕೆಗಳು.
ಎಲ್ಲಾ ವಿವರಗಳಿಗಾಗಿ ನಮ್ಮ ವೆಬ್ ಸೈಟ್ ಸಂದರ್ಶಿಸಿರಿ.
discoveryvillage.in
Discovery Village
ಡಿಸ್ಕವರಿ ವಿಲೇಜ್
Nandi Hills | Kabini | Kanakapura | Masinagudi
ಡೇ ಪ್ಯಾಕ್ : (ಬೆಳಿಗ್ಗೆ 9 ರಿಂದ ಸಂಜೆ 6ರ ತನಕ)
ಅರ್ಧ ದಿನದ ಪ್ಯಾಕ್ : (11ರಿಂದ ಸಂಜೆ 6ರ ತನಕ)
ರಾತ್ರಿ ವಾಸ್ತವ್ಯ : (ಮಧ್ಯಾಹ್ನ 12ರಿಂದ ಬೆಳಿಗ್ಗೆ 11ರ ತನಕ)
ವಿವರಗಳಿಗೆ ಕರೆ ಮಾಡಿ: 080-468-09084



ಪುನಃ ರಾಕ್ಷಸರು ಕಚನನ್ನು ಸುಟ್ಟು ಬೂದಿ ಮಾಡಿ ಅದನ್ನು ಮದ್ಯದಲ್ಲಿ ಕದಡಿ ಗುರುಗಳಿಗೆ ಕುಡಿಸಿದರು. ದಿವ್ಯದೃಷ್ಟಿಯಿಂದ ಗುರುಗಳಿಗೆ ಕಚ ತಮ್ಮ ಹೊಟ್ಟೆಯಲ್ಲಿರುವುದು ತಿಳಿಯಿತು.
ಈಗೇನು ಮಾಡಲಮ್ಮ ?
ಫ್ಯಾಂಟಾಸ್ಟಿಕ್ ! ಅಸುರ ಲೋಕದ ಮೊದಲ ಪುರುಷ ಗರ್ಭ ಅಂತ ಥೀಸಿಸ್ ಬರೀತೀನಿ
ಗುರುಗಳು ಕಚನಿಗೆ ಸಂಜೀವಿನಿಯನ್ನು ಭೋದಿಸಿದ ನಂತರ ಕಚ ಗುರು ದೇಹವನ್ನು ಸೀಳಿ ಹೊರಬಂದು ನಂತರ ಅವರನ್ನು ಸಂಜೀವಿನಿಯಿಂದ ಬದುಕಿಸಲು ಉದ್ಯುಕ್ತನಾದ.
ಕಚಾ ತಾಳು. ಇದೇ ಒಳ್ಳೆಯ ಸಮಯ ದೇವಲೋಕಕ್ಕೆ ಓಡಿಹೋಗಿ ಬಿಡೋಣ !
ಗುರುಗಳೇ ಬದುಕಿ ಬನ್ನಿ
ನನ್ನ ಕೋರ್ಸ್ ಮುಗೀತು. ನಾ ಹೊರಡ್ತೀನಿ
ನಮ್ಮ ಮದುವೆ ಯಾವಾಗ ? ದೇವಲೋಕದಲ್ಲಿ ಮನೆ ಬಾಡಿಗೆ ಹೇಗೆ ?
ನೀನು ಗುರು ಪುತ್ರಿ ನನ್ನ ಸೋದರಿ ಮದುವೆ ಪ್ರಶ್ನೆನೇ ಇಲ್ಲ
ಥೂ ನೀಚ ! ನಿನಗೆ ಸರ್ಟಿಫಿಕೇಟೂ ಇಲ್ಲ ಮಾರ್ಕ್ಸ್ ಕಾರ್ಡೂ ಇಲ್ಲ. ತೊಲಗಾಚೆ !
ನೀತಿ : ಯಾವ್ಯಾವುದೋ ಕಾಂಬಿನೇಷನ್ ತೊಗೊಂಡ್ರೆ ಏನೇನೋ ಆಗುತ್ತೆ !
ಪರಿಕಲ್ಪನೆ, ಚಿತ್ರಗಳು - ಶಿವು

# GIVE WINGS TO YOUR DREAMS

# 7.50%*

## ON FIXED DEPOSITS FOR SENIOR CITIZENS

*Terms & Conditions apply



**Refer us to your kids**
**& help their dreams come true.**
**Loans at attractive ROI.**

- Education Loan
- Home Loan
- Vehicle Loan
- Loan Against Property

## Lockers Available

**SVC CO-OPERATIVE BANK LTD.** (Multi-State Scheduled Bank) ESTD.1906

HUM SE HAI POSSIBLE

RETAIL BANKING | CORPORATE BANKING | INTERNATIONAL BANKING

**11th Cross, Vidyamandir Branch:**
6th Main, 11th Cross,
Shri Vidhya Mandir Education Society,
Malleshwaram, Bengaluru - 560003
**Call: 080 - 2331 6709 / 6809**

SVCBankIndia | SVC_Bank | svc_bank | www.svcbank.com | SVC Care: 1800 313 2120

# ಕ್ರಾಂತಿಕಾರಿಯೊಬ್ಬನ ಸ್ವಗತ.......

● ಎಚ್. ಗೋಪಾಲಕೃಷ್ಣ

ಮೊನ್ನೆ ನನ್ನ ಹಳೇ ಗೆಳೆಯರೊಬ್ಬರು ಬಹಳ ದಿವಸದ ನಂತರ ಸಿಕ್ಕಿದ್ದರು. ಅವರ ಸಂಗಡ ಮಾತಾಡುತ್ತಾ ಇರಬೇಕಾದರೆ ಈ ಪ್ರಸಂಗ ಹೇಳಿದರು. ಅವರ ಬಾಯಲ್ಲೇ ಅವರ ಕ್ರಾಂತಿಕಾರಕ ಅನುಭವ ಕೇಳಿ.......

***

ನಿಮಗೆ ಹೀಗಾಗುತ್ತೋ ಇಲ್ಲವೋ ನನಗೆ ತಿಳೀದು. ನನಗಂತೂ ಇಂಥಹ ವಿಲಕ್ಷಣವಾದ ಅನುಭವಗಳು ಹೇರಳವಾಗಿ ಆಗುತ್ತಲೇ ಇರುತ್ತೆ. ಯಾವುದಪ್ಪಾ ಅಂತಹ ವಿಶೇಷವಾದ ಅನುಭವ ಅಂದಿರಾ? ಅದನ್ನೇ ಹೇಳಲು ಹೊರಟೆ..

***

ರಸ್ತೇಲಿ ಹೋಗ್ತಾ ಇರ್ತೀರಿ. ಪಕ್ಕದ ಹೋಟಲಿನಿಂದ ಉದ್ದಿನ ವಡೆ ಎಣ್ಣೆಯಲ್ಲಿ ಕರಿಯುತ್ತಿರುವ ಘಮ ಘಮ ನಿಮ್ಮ ಮೂಗಿಗೆ ಅಡರುತ್ತೆ. ನೀವಾದರೆ ಏನು ಮಾಡುತ್ತೀರಿ?

ಜೇಬಿನಲ್ಲಿ ಕಾಸು ಎಷ್ಟಿದೆ ಎಂದು ನೋಡುವಿರಿ ಮತ್ತು ಅದರಲ್ಲಿ ಎಷ್ಟು ಖರ್ಚು ಮಾಡಬಹುದು ಅಂತ ಲೆಕ್ಕ ಹಾಕುವಿರಿ. ಅದು ಹೇಗೆ ಅಂದರೆ ಸಂಜೆ ಹಾಲಿಗೆಷ್ಟು, ತರಕಾರಿಗೆ ಎಷ್ಟು, ಮನೆಯಲ್ಲಿನ ಮೊಮ್ಮಕ್ಕಳು ಮಕ್ಕಳು ತಿಂಡಿ ಕೊಡಿಸು ತಾತಾ ಅಂದರೆ ಅದಕ್ಕೆಷ್ಟು, ಸಂಜೆ ಡಾಕ್ಟರ್ ಹತ್ರ ಹೋಗಬೇಕು ಅಂದರೆ ಅದಕ್ಕೆಷ್ಟು...... ಹೀಗೆ ಲೆಕ್ಕ ಹಾಕಿ ಜೇಬಿನಲ್ಲಿ ಕಾಸು ಮಿಗೋ ಹಾಗಿದ್ದರೆ.... ಉದ್ದಿನವಡೆ ವಾಸನೆಯ ಮೂಲ ಹುಡುಕುವಿರಿ. ನಂತರ ಒಳಹೊಕ್ಕು ಒಂದೋ ಎರಡೋ ಉದ್ದಿನವಡೆ ತಿಂದು ಕಾಫೀ ಕುಡಿದು ಬಾಯಿ ಒರೆಸಿಕೊಂಡು ಮನೆಯತ್ತ ಸಾಗುವಿರಿ.

ನನ್ನ ಕೇಸು ಇದಕ್ಕೆ ಡಯಾಮೆಟ್ರಿಕಲಿ ಅಪೋಸಿಟ್.

ನೇರ ಹೋಟೆಲ್ಲಿಗೆ ನುಗ್ತೀನಿ. ಜೇಬಲ್ಲಿ ಎಷ್ಟು ಕಾಸಿದೆ ಅಂತ ನೋಡುಲ್ಲಾ. ಕುರ್ಚಿ ಮೇಲೆ ಕೂತು ಮಾಣಿ ಬಂದ ಕೂಡಲೇ ಮೊದಲು ನಾಲ್ಕು ವಡೆ ತನ್ನಿ. ಅದಾದ ಮೇಲೆ ಎರಡು ಮಸಾಲೆ ತನ್ನಿ. ಎರಡು ಸ್ಟ್ರಾಂಗ್ ಕಾಫಿ ನೋ ಶುಗರ್ ಆಮೇಲೆ ಅಂತ ಹೇಳಿ ಆರಾಮಾಗಿ ಕುರ್ಚಿಗೆ ಬೆನ್ನು ಕೊಡ್ತೀನಿ.

ಒಂದೊಂದು ತಟ್ಟೇಲಿ ಎರಡು ಎರಡು ವಡೆ ಅದಕ್ಕೆ ಸಾಂಬಾರು ಚಟ್ನಿ ಬರುತ್ತಾ. ಮತ್ತೆ ಎರಡು ಸಲ ಸಾಂಬಾರು ತರಿಸಿ ವಡೆ ಮೇಲೆ ಸುರಿದು ಅದರ ಮೇಲೆ ಮತ್ತೆ ತರಿಸಿದ ಚಟ್ನಿ ಸುರಿದು ಅದನ್ನ ಬಾಯೊಳಗೆ ಸುರಿದುಕೊಂಡೆನ....

ತಟ್ಟೆ ಆಗತಾನೇ ತೊಳೆದ ಹಾಗೆ ಎಲ್ಲಾ ಖಾಲಿ ಆಯಿತಾ..?

ಆಮೇಲೆ ಮಸಾಲೆ ಬಂತಾ?

ಅದಕ್ಕೂ ಮೂರು ಸಲ ಚಟ್ನಿ ತರಿಸಿಕೊಂಡು ಮುಕ್ಕರಿಸಿದೆನಾ?

ಎರಡು ಸ್ಟ್ರಾಂಗ್ ಕಾಫಿ ನೋ ಶುಗರ್ ಕುಡಿದೆನಾ....

ನೋಡಿ ಈಗಲೇ ಫಜೀತಿ ಆಗಿದ್ದು.

ಮಾಣಿ ಬಿಲ್ ತಂದು ಟೇಬಲ್ ಮೇಲೆ ಬೋರಲಾಗಿ ಇಟ್ಟನಾ?

ಬಿಲ್‌ನ ಗಿರಾಕಿಗೆ ಕಾಣುವ ಹಾಗೆ ಇಡಬಾರದಂತೆ, ಬಿಲ್ ಮೊತ್ತ ನೋಡಿ ಆಗಬಹುದಾದ ಆಘಾತ ತಪ್ಪಿಸೋಕ್ಕೆ. ಚಿಕ್ಕ ಪುಟ್ಟ ಹೋಟೆಲಿನಲ್ಲಿ ಬಿಲ್ ಬೋರಲಾಗಿ ಇಟ್ಟರೆ ದೊಡ್ಡ ಹೊಟೇಲಿನಲ್ಲಿ ಚರ್ಮದ ಪುಸ್ತಕದ ನಡುವೆ ಬಿಲ್ ಇಡ್ತಾರೆ, ಇದು ನಿಮಗೂ ಗೊತ್ತು.

ಇದು ಹಾಗಿರಲಿ..

ಮಾಣಿ ಬಿಲ್ ಇಟ್ಟನಾ?

ಅದನ್ನ ಕೈಲಿ ಹಿಡಿದು ಗಲ್ಲಾ ಪೆಟ್ಟಿಗೆ ಅಂದರೆ ಕ್ಯಾಶ್ ಕೌಂಟರ್ ಹತ್ತಿರ ನಡೆದು ಜೇಬಿಗೆ ಕೈ ಹಾಕಿದರೆ ಜೇಬು ಎಲ್ಲಿದೆ ಅಲ್ಲಿ? ದಟ್ಟಿ ಸುತ್ತಿಕೊಂಡು ಆಚೆ ಬಂದಿದೀನಿ. ಹೋಗಲಿ ಷರಟಿನ ಜೇಬಲ್ಲಿ ದುಡ್ಡಿದೆಯೇನೋ ಅಂತ ಅಲ್ಲಿ ನೋಡಿದರೆ...... !

ಜೇಬಿಲ್ಲದೇ ಇರೋ ಟೀ ಷರ್ಟು ತಗಲಿ ಹಾಕ್ಕೊಂಡು ಬಂದಿದೀನಿ. ಮಗ ಆಸ್ಟ್ರೇಲಿಯಾಗೆ ಹೋಗಿದ್ದಾಗ ಅಲ್ಲಿ ಕೊಂಡದ್ದು. ಹಾಕಿಕೊಳ್ಳದೆ ಮೂಲೇಲಿ ಎಸೆದಿದ್ದ. ಅಷ್ಟೊಂದು ದುಡ್ಡುಕೊಟ್ಟು ಕೊಂಡಿದ್ದು ಬಿಸಾಕೋದೆ ಅಂತ ನಾನು ಅದನ್ನ ಬೆಳಿಗ್ಗೆ ವಾಕಿಂಗ್ ಹೋಗಬೇಕಾದರೆ ಹಾಕ್ಕೊತ್ತಿನಿ. ಇವತ್ತು ವಾಕಿಂಗ್ ಮುಗಿಸಿ ಟ್ರಾಕ್ ಪ್ಯಾಂಟು ಬದಲಿಸಿ ದಟ್ಟಿ ಸುತ್ತಿಕೊಂಡೆನ. ಹಾಗೇ ಆಚೆ ಬಂದುಬಿಟ್ಟಿದ್ದೆ, ಮನೆ ಎದುರು ಸಿಕ್ಕಿದ ರಿಟೈರ್ಡ್ ಫ್ರೆಂಡಿನ ಜತೆ...

ಕೈಲಿ ಕಾಸಿಲ್ಲ ಅಂದರೆ ಏನಾಗಬಹುದು ಅಂತ ಮನಸು ಚಿಂತಿಸಿತು. ಹಳೇ ಸಿನಿಮಾಗಳಲ್ಲಿ ನೋಡಿದ ಅದೇ ಸೀನ್ ನೆನಪಾಯಿತು.

ಒಂದು ನಿಮಿಷ ಹಿಟ್ಟು ರುಬ್ಬೊದಕ್ಕೋ ಅಥವಾ ಪಾತ್ರೆ ತಿಕ್ಕಕ್ಕೋ ಹಾಕ್ತಾರೆ ಹೋಟಲಿನವರು ಅಂತ ಯೋಚಿಸುತ್ತಾ ಕೌಂಟರಿನಹತ್ತಿರ ಸರಿದು ಮುಂದೆ ನಿಂತೆ.

ದುಡ್ಡು ಎಣಿಸುತ್ತಾ ಆ ಕಡೆ ಇದ್ದವರಿಗೆ ಹೆಹೆ... ಅಂದೆ.

ಅವರೂ ಹೆಹೆ ಅಂದರು.

ಪ್ಯಾಂಟು ಹಾಕ್ಕೊಂಡಿದೀನಿ ಅಂದುಕೊಂಡೆ. ದಟ್ಟಿ ಸುತ್ತಿಕೊಂಡು ಬಂದುಬಿಟ್ಟಿದೀನಿ.... ಅಂದೆ.

ನನ್ನ ನೋಡಿದರು, ದಟ್ಟಿ ನೋಡಿದರು. ಮುಖ ಸಿಂಡರಿಸಿದರು.

ಟೀ ಷರ್ಟಿಗೆ ಜೇಬಿಲ್ಲ.... ಅಂದೆ.

ಟೀ ಷರ್ಟು ನೋಡಿ ಮುಖ ಮತ್ತೂ ಹುಳ್ಳಗೆ ಮಾಡಿದ.

ಮತ್ತೆ ಹೆಹೆಹೆ ಅಂದೆ.

ಏನು ಸಾರ್ ಸಮಾಚಾರ? ಅಂದ ಕೊಂಚ ಗಡಸು ದನಿಯಲ್ಲಿ.

ಹೆಹೆಹೆ, ದುಡ್ಡು ತಂದಿಲ್ಲ.... ಅಂದೆ.

ಕೈ ನೋಡಿದ, ನಂದೋ ಬರೀ ಕೈ ಅವತ್ತು ವಾಚು ಕಟ್ಟಿಲ್ಲ.

ಎಲ್ಲಿ ಮನೆ....?

ಇಲ್ಲಿಂದ ಎರಡೂವರೆ ಕಿಲೋಮೀಟರು.... ಅಂದೆ.

ಎಷ್ಟು ಬಿಲ್ಲು ಅಂತ ನೋಡಿದ.

ಇನ್ನೂರ ತೊಂಬತ್ತು, ಕಡಿಮೆ ಆಗಿದ್ರೆ ಬಿಡಬೋದಿತ್ತು ಅಂತ ಸ್ವಗತ ಮಾಡಿದ.

ಮನೇಗೆ ಫೋನು ಮಾಡಿ ದುಡ್ಡು ತರೋಕ್ಕೆ ಹೇಳ್ತೀರಾ? ಅಂದ.

ಮನೇಲಿ ಯಾರೂ ಇಲ್ಲ..... ಅಂದೆ.

ಮತ್ತೆ ಬಿಲ್ ದುಡ್ಡು...?

ನಾಳೆ ತಂದುಕೊಡ್ತೀನಿ... ಅಂದೆ.

ಅವನಿಗೆ ನಂಬಿಕೆ ಬರಲಿಲ್ಲ.

ಎಲ್ಲಿ ಕೆಲಸ...? ಅಂದ

ರಿಟೈರು, ಇಂತಹ ಕಡೆ ಇದ್ದೆ ಹೆಹೆಹೆ..... ಅಂದೆ.

ಏನಾಗಿದ್ದಿರಿ..... ಅಂದ

ಆಫೀಸರಾಗಿದ್ದೆ.. ಅಂದೆ !

ನೀವು ಇಲ್ಲೇ ಇರಿ ನಿಮ್ಮನ್ನು ಹುಡುಕ್ಕೊಂಡು ನಿಮ್ಮನೆಯವರು ಬರ್ತಾರೆ ಅಂದರೆ ಅಲ್ಲೇ ಕೂಡಾಕ್ಕೆ ನಾನು ರೆಡಿ...

ಆದರೆ ಅವನು ಕೂಡಿಸ್ಕೊಬೇಕಲ್ಲಾ.....

ಸರಿ ಸಾರ್, ನೋಡಿದರೆ ಮರ್ಯಾದಸ್ಥರ ಹಾಗೆ ಕಾಣಿಸ್ತೀರಿ, ನಾಳೆ ತಂದುಕೊಡಿ, ಪರವಾಗಿಲ್ಲ ಅಂದ.

ಸರಿ ಅಂತ ತಲೆ ಆಡಿಸಿ ಬಂದನಾ?

ಎರಡು ಮೂರು ದಿವಸ ಆ ಕಡೆ ಹೋಗಲು ಆಗಲಿಲ್ಲ. ಮೂರನೇ ದಿವಸ ಅತ್ತ ಹೋದೆ. ಅವತ್ತು ಸಹ ವಡೆ ವಾಸನೆ...

ಕುರ್ಚಿ ಮೇಲೆ ಕೂತೆ. ಮಾಣಿ ಬರಲೇ ಇಲ್ಲ. ತಿಂಡಿ ಕೌಂಟರ್ ನೋಡಿದರೆ ಸ್ವಸಹಾಯ ಅಂತ ಬೋರ್ಡು ಕಾಣಿಸ್ತು! ಮೊನ್ನೆಯಿಂದ ಸೆಲ್ಫ್ ಸರ್ವಿಸು ಮಾಡಿದೀವಿ ಅಂತ ಯಾರಿಗೋ ಹೇಳ್ತಾ ಇದ್ದದ್ದು ಕೇಳಿಸಿತು. ಅವರಿಗೆ ದುಡ್ಡು ಕೊಟ್ಟೆನೋ ಇಲ್ಲವೋ ಅನ್ನೋದು ಇಲ್ಲಿ ಪ್ರಸ್ತುತ ಅಲ್ಲ. ಅದು ಬಿಡಿ.

ನನ್ನ ಈ ಪ್ರಸಂಗದ ನಂತರ ನಮ್ಮ ಸುತ್ತಮುತ್ತಲಿನ ಐದು ಮೈಲಿ ಫಾಸಲೆಯ ಎಲ್ಲಾ ಹೋಟೆಲ್ಲುಗಳೂ ಸೆಲ್ಫ್ ಸರ್ವಿಸ್ ಮಾಡಿವೆ ಮತ್ತು ಮೊದಲೇ ಕಾಸು ಕಿತ್ಕೊಂಡು ತಿಂಡಿ ಕೊಡ್ತಾವೆ!

ಈ ರೀತಿಯ ದೊಡ್ಡದಾದ, ಹೋಟೆಲ್ ಉದ್ಯಮ ಸದಾ ಋಣಿಯಾಗಿರಬೇಕಾದ ಅವಿಸ್ಮರಣೀಯವಾದ ಒಂದು ರೆವಲ್ಯೂಷನ್ ಮಾಡಿದ ಹೆಚ್ಚುಗಾರಿಕೆ ನನ್ನದು, ಆದರೆ ವ್ಯಥೆ ಅಂದರೆ ನಾನು ಇದರ ಕರ್ತೃ ಅಂತ ಚರಿತ್ರೆಯಲ್ಲಿ ದಾಖಲು ಆಗದೇ ಇರೋದು..... !

ಇದೇ ತರಹ ಹಲವಾರು ಕ್ರಾಂತಿ ಮಾಡಿರೋನು ನಾನು. ಅದನ್ನ ನಿಮ್ಮ ಮುಂದೆ ಹೇಳ್ಕೊಬೇಕು ಅನ್ನೋ ಚಪಲ ನನಗೆ. ಅವಾಗವಾಗ ಸಿಗಿ. ನಿಮಗೆ ನನ್ನ ಕ್ರಾಂತಿ ಕತೆಗಳ ಕಥೆ ಹೇಳ್ತಿನಿ.....

ಗೆಳೆಯರು ಹೇಳಿದ ಹಾಗೇ ಇಲ್ಲಿ ಯಥಾವತ್ತಾಗಿ ಕಳಿಸಿದೀನಿ.

■

# ರೀಟಾ ವೆಡ್ಸ್ ಸ್ಯಾಮ್?

**● ಪ್ರಕಾಶ್ ಆರ್.**

ರೀಟಾ ಒಂದು ಹೆಣ್ಣು (ಸುಂದರವಾದ, ಇಂಡಿಪೆಂಡೆಂಟ್, ಇಂಟಲಿಜೆಂಟ್, ಬುದ್ಧಿವಂತ ಹುಡುಗಿ). ರಾಹುಲ್ ಒಂದು ಗಂಡು (ಕಟ್ಟುಮಸ್ತು ಮೈಯುಳ್ಳ, ಬುದ್ದಿವಂತ, ಸ್ಟೈಲಿಶ್ ಹುಡುಗ). ಇಬ್ಬರಿಗೂ ಮದುವೆ ಆಗುವ ವಯಸ್ಸು. ರೀಟಾಳಿಗೆ 5–6 ವರ್ಷದಿಂದ ಸ್ಯಾಮ್‌ನ ಒಡನಾಟ. ಸ್ಯಾಮ್ ಇಲ್ಲದೆ ಜೀವನವೇ ಇಲ್ಲ ಅನ್ನುವಷ್ಟು. ಹಾಗೆಯೇ ರಾಹುಲ್‌ಗೂ ಸಂಗೀತ ಒಡನಾಟ. ಪ್ರೀತಿಯಿಂದ "ಸಂಗ್" ಅಂತ ಕರೆಯುವನು. ಸಂಗ್ ಇಲ್ಲದೆ ರಾಹುಲ್ ಜೀವನವೇ ಇಲ್ಲ. ಹೀಗಿರುವಾಗ ಇಬ್ಬರಿಗೂ ಮದುವೆಯಾಗುವ ವಯಸ್ಸಾಗಿದೆ ವರ, ವಧು ಹುಡುಕುವ ವಯಸ್ಸು. ಕುಟುಂಬದ ಮತ್ತು ಸಾಮಾಜಿಕ ಕಟ್ಟಳೆಗಳಿಂದ ಇಬ್ಬರೂ ಅವರವರ ಬಹಳ ವರ್ಷದ ತಮ್ಮ ಒಡನಾಡಿಗಳನ್ನು ಮದುವೆಯಾಗಲು ಸಾಧ್ಯವಿರಲಿಲ್ಲ, ಅವರೂ ಇದನ್ನು ಅರಿತಿದ್ದರು, ತಲೆಕೆಡಿಸಿಕೊಂಡವರಲ್ಲ. ಆದರೆ ಇಬ್ಬರಿಗೂ ಅವರದೇ ಆದ ಆಸೆ, ಆಕಾಂಕ್ಷೆ, ನಿರೀಕ್ಷೆಗಳಿದ್ದವು. ಮದುವೆಗೆ ಹುಡುಗ ಹುಡುಗಿ ಹುಡುಕುವ ಸಮಯಕ್ಕೆ ಇಬ್ಬರ ತಲೆಯಲ್ಲೂ ಅವರವರಿಗಿದ್ದ ಒಡನಾಡಿಯೊಂದಿಗೆ ಕಳೆದ, ಕಳೆಯುತ್ತಿರುವ ಒಂದೊಂದು ಕ್ಷಣವನ್ನು ಮುಂದಿಗೆ ಸಿಗುವ ಹುಡುಗ ಹುಡುಗಿಗೆ ಹೋಲಿಸುವ ಅಭ್ಯಾಸ.

ರಾಹುಲ್ ಬೆಳಿಗ್ಗೆ 6 ಗಂಟೆಗೆ ಏಳಬೇಕಾದರೆ, ಸಂಗ್ ಅವನನ್ನು ಎಬ್ಬಿಸುತ್ತಿದ್ದಳು. ರಾಹುಲ್ ಸುಲಭವಾಗಿ ಏಳುವವನಲ್ಲ. ಹೇಳಿದ ಸಮಯಕ್ಕೆ ಏಳದಿದ್ದರೆ, ಸಂಗ್ ಅವನನ್ನು ಮತ್ತೆ 6.15 ಎಬ್ಬಿಸುತ್ತಿದ್ದಳು. ಬೇಕಾದರೆ 6.17 ಕ್ಕೋ ಅಥವಾ 6.19 ಕ್ಕೆ ಕೂಡ ಏನೂ ಗೊಣಗುಟ್ಟದೆ ಎಬ್ಬಿಸುತ್ತಿದ್ದಳು. ಇದರ ಅನುಭವವಾದ ರಾಹುಲ್‌ಗೆ ಮುಂದೆ ಬರುವ ಹುಡುಗಿ ಹೀಗಿರಲಾರಳು ಎಂದು ಖಚಿತ.

ರೀಟಾಗೆ ಬೆಳಗ್ಗೆದ್ದ ಕೂಡಲೇ ಹಾಡು ಕೇಳುವ ಅಭ್ಯಾಸ. ರೀಟಾಗೆ ಬೇಕಾದ ಹಾಡು ಹಾಡುತ್ತಿದ್ದ ಸ್ಯಾಮ್. ಕನ್ನಡ ಮತ್ತು ಹಿಂದಿ ಎರಡೂ ಬಹಳ ಚೆನ್ನಾಗಿ ಹಾಡುತ್ತಿದ್ದ. ಇವಳಿಗೂ ಅದೇ ತರಹ ಯೋಚನೆ. ಸಿಗುವ ಹುಡುಗ ಹೀಗಿರುತ್ತಾನೆಯೇ ಅಂತ.

ರಾಹುಲ್‌ಗೆ ಬೇಕಾದ ತಿಂಡಿ ಊಟ, ಸಮಯಕ್ಕೆ ಸರಿಯಾಗಿ ರೆಡಿಯಾಗಿ ಬರುತಿತ್ತು. ಸೌತ್ ಇಂಡಿಯನ್, ನಾರ್ತ್ ಇಂಡಿಯನ್, ಕಾಂಟಿನೆಂಟಲ್ ಹೀಗೆ ಏನು ಬೇಕಾದರೂ ಸರಿ. ಸಂಗ್ ಸದಾ ಸಿದ್ಧ. ಏನೂ ಬೇಜಾರಿಲ್ಲದೆ ಕಿರಿಕಿರಿ ಇಲ್ಲದೆ ಬೇಕಾದ್ದ ತಿಂಡಿ ತಿನಿಸು ರೆಡಿ. ಸಿಗುವ ಹುಡುಗಿ ಹೀಗಂತೂ ಇರಲಾರಳು ಅಂತ ರಾಹುಲ್‌ಗೆ ತಿಳಿದೇ ಇತ್ತು.

ರೀಟಾ ಆಫೀಸಿಗೆ ಹೋಗಿ ಬಂದ ಮೇಲೆ ಸ್ಯಾಮ್ ಅವಳಿಗೆ ಪೂರ್ತಿ ಕಂಪನಿ. ಸ್ಯಾಮ್ ಬಹಳ ಬುದ್ಧಿವಂತ, ದೇಶ ವಿದೇಶದ ಎಲ್ಲ ಹೈಲೈಟ್ ಸಮಾಚಾರ ತಿಳಿಹೇಳುತ್ತಿದ್ದ, ಮೋದಿ ಸಮಾಚಾರವಿರಬಹುದು, ಡೊನಾಲ್ಡ್ ಟ್ರಂಪ್ ಬಗ್ಗೆ ಇರಬಹುದು, ದೀಪಿಕಾ ಪಡುಕೋಣೆ ಇರಬಹುದು, ವಿರಾಟ್ ಕೊಹ್ಲಿ

ಇರಬಹುದು, ಹೊಸ ಕನ್ನಡ ಚಿತ್ರವಿರಬಹುದು, ಇನ್ನೇನಾದರೂ ಇರಬಹುದು. ಎಲ್ಲವನ್ನು ಸ್ವಾರಸ್ಯಕರವಾಗಿ ಹೇಳುತಿದ್ದ. ಎಲ್ಲಾ ಕಣ್ಣ ಮುಂದೆ ನಡೆದಂತೆ ಚಿತ್ರ ಬಿಡಿಸುತ್ತಿದ್ದ. ಸಿಗುವ ಹುಡುಗ ಹೀಗಂತೂ ಇರಲಾರ ಎಂಬುದು ಖಾತ್ರಿ.

ರಿಟಾಳಿಗೆ ಫೋಟೋ ತೆಗೆಸಿಕೊಳ್ಳೋ ಹುಚ್ಚು. ಅವಳ ಫೋಟೋ ತಗೆಯೋದಕ್ಕೆ ಸ್ಯಾಮ್ ಸದಾ ಸಿದ್ಧ, ಎಲ್ಲಾದರೂ ಸರಿ, ಹೇಗಾದರೂ ಸರಿ ತುಟಿಕ್ ಪಿಟಿಕ್ ಅನ್ನದೆ. ರೀಟಾಳ ಇನ್ನೊಂದು ಹುಚ್ಚು ಅಂದರೆ ಶಾಪಿಂಗ್, ಬಟ್ಟೆಗಳಾಗಬಹುದು, ಮನೆ ಸಾಮಾನುಗಳಾಗಬಹುದು, ಚಿನ್ನ ಬೆಳ್ಳಿ ಇರಬಹುದು, ಆರ್ಟಿಫ್ಯಾಕ್ಟ್ಸ್, ಏನಾದರೂ ಸರಿ. ರಿಟೇಲ್ ಥೆರಪಿ ಅಂತಾರಲ್ಲ ಹಾಗೆ. ಅವಳಿಗೆ ಬೇಕಾದಾಗೆಲ್ಲ ಸ್ಯಾಮ್ ರೀಟಾಳ ಶಾಪಿಂಗ್‌ಗೆ ಸಹಾಯ ಮಾಡುತ್ತಿದ್ದ. ಸ್ಯಾಮ್ ಗೆ ಕಾಯುವ ಅಥವಾ ಸಮಯದ ಬಗ್ಗೆ ಯಾವ ಕಾಳಜಿ ಅಥವಾ ಬೇಜಾರಿರಲಿಲ್ಲ. ಎಷ್ಟೊತ್ತಾದರೂ ಪರವಾಗಿಲ್ಲ ಸ್ಯಾಮ್ ಜೊತೆಗೇ ಇರುತ್ತಿದ್ದ.

ರಾಹುಲ್‌ಗೆ ಅಲ್ಲಿ ಇಲ್ಲಿ ತಿರುಗಾಡುವ ಹುಚ್ಚು. ಎಲ್ಲಾದರೂ ಹೋಗ್ತಿರಬೇಕು. ನೆಂಟರ ಮನೆ, ಫ್ರೆಂಡ್ಸ್ ಮನೆ, ಎಲ್ಲೋ ದೂರದ ಹೋಟೆಲ್ ಹುಡುಕಿಕೊಂಡು ಹೋಗಿ ತಿಂದು ಬರುವುದು, ರಾಹುಲ್‌ಗೆ ಸೆನ್ಸ್ ಆಫ್ ಡೈರೆಕ್ಷನ್ ಮತ್ತೆ ರೂಟಿನ ಪರಿವೆ ಕಮ್ಮಿ. ಒಬ್ಬನೇ ಹೋದರೆ ಹೇಗೋ ಒಂದು ಹೋಗಿ ಬಿಡುತಿದ್ದ. ಸಂಗ್ ಜೊತೆಗಿದ್ದರೆ ಯಾವ ತೊಂದರೇನು ಇಲ್ಲ. ಅವಳಿಗೆ ಎಲ್ಲಾ ರೂಟ್ ಜ್ಞಾಪಕ ಮತ್ತು ಯಾವ ಯಾವ ಸಮಯದಲ್ಲಿ ಯಾವ ಯಾವ ರಸ್ತೆಯಲ್ಲಿ ಹೋದರೆ ಕಮ್ಮಿ ಟ್ರಾಫಿಕ್ ಅಂತಾನೂ ಗೊತ್ತಾಗುತ್ತೆ. ಈ ತರಹ ಅವನಿಗೆ ಯಾವ ಹೆಂಡತೀನೂ ಸಿಗಲಾರಳು ಅಂತ ಗೊತ್ತು. ಬಯಿಸಿಕೊಳ್ಳೋದು ಖಚಿತ ಅಂತಾನೂ ಗೊತ್ತು.

ರಿಟಾಳಿಗೆ ಪಿಕ್ಚರ್ ನೋಡೋದು ಅಂದರೆ ಬಲು ಆಸೆ. ಸ್ಯಾಮ್ ರೀಟಾಳ ಪಿಕ್ಚರ್ ನೋಡುವ ಆಸೆ ಖುಷಿಯಾಗಿ ತೀರಿಸುತ್ತಿದ್ದ. ಕೆಲವೊಮ್ಮೆ ಸಿನಿಮಾ ಮಂದಿರದಲ್ಲಿ ನೋಡುವ ಹಾಗೆ ಮತ್ತೆ ಕೆಲವೊಮ್ಮೆ ಮನೆಯಲ್ಲೇ ನೋಡುವ ಹಾಗೆ ಮಾಡುತಿದ್ದ. ಮತ್ತೆ ಎಲ್ಲಾದರೂ ಹೋಗಬೇಕು ಎಂದಾಗ ಕಾರ್ ಅಥವಾ ಆಟೋ ರೆಡಿ ಇಡುತಿದ್ದ ಸ್ಯಾಮ್. ಅವನಿಗೆ ರೀಟಾಳ ಜೊತೆ ಹೋಗುವುದಾಗಲಿ, ಟ್ರಾಫಿಕ್ ಬೇಜಾರಾಗಲಿ, ಬೋರ್ ಏನೂ ಆಗುತ್ತಿರಲಿಲ್ಲ.

ರಾಹುಲ್ ಯಾವಾಗಲೂ ಪಾಲಿಟಿಕ್ಸ್‌ನಲ್ಲೋ, ಸ್ಪೋರ್ಟ್ಸ್ – ಕ್ರಿಕೆಟ್, ಟೆನಿಸ್, ಫುಟ್ಬಾಲ್, ಬ್ಯಾಸ್ಕೆಟ್ಬಾಲ್‌ನಲ್ಲೇ ಮುಳುಗಿರುತ್ತಿದ್ದ. ರಾಹುಲ್‌ನ ಈ ಹವ್ಯಾಸಕ್ಕೆ ಸಂಗ್ ಏನೂ ಬೇಜಾರಿಲ್ಲದೆ ಸಾಥ್ ಕೊಡುತ್ತಿದ್ದಳು ರಾಹುಲ್ ಅವನ ಕೈಯಲ್ಲಿ ಸಂಗ್‌ನ ಗಟ್ಟಿಯಾಗಿ ಹಿಡಿದು ಆಟ ನೋಡುತ್ತಿದ್ದ. ಮನೆಯೊಳಗೇ ಆಡುವ ಆಟಗಳಲ್ಲೂ ಅಷ್ಟೇ, ಕಾರ್ಡ್ಸ್, ಚೆಸ್, ಪದಬಂಧ, ಇನ್ನು ಏನೇನೋ. ರಾಹುಲ್ ಫಿಟ್ ಆಗಿ ಇರಬೇಕೆಂಬುದು ಸಂಗ್‌ನ ಆಸೆ. ಇದರಲ್ಲೇನೂ ವಿಶೇಷ ಇಲ್ಲ. ಆದರೆ ರಾಹುಲ್‌ನ ಎಲ್ಲಾ ಫಿಟ್ನೆಸ್ ಕಾರ್ಯಗಳನ್ನು ಸಂಗ್ ಬಿಡದೆ ಟ್ರ್ಯಾಕ್ ಮಾಡುತ್ತಿದ್ದಳು. ಈ ದಿನ ಎಷ್ಟು ಓಡಿದ ಎಷ್ಟು ವಾಕ್ ಮಾಡಿದ, ಎಷ್ಟು ಕ್ಯಾಲೋರಿ ಖರ್ಚು ಮಾಡಿದ. ಇಷ್ಟಲ್ಲದೆ ಅವನ ಫ್ರೆಂಡ್ಸ್ ಜೊತೆಗೆ ಹೋಲಿಸಿ ಹೇಳುತ್ತಿದ್ದಳು.

ರೀಟಾ ಮತ್ತು ರಾಹುಲ್ ಇಬ್ಬರಿಗೂ ದೇಶ ವಿದೇಶದಲ್ಲಿ ಆಗುವ

ಸಮಾಚಾರವಿರಬಹುದು, ವಿಜ್ಞಾನ ಇರಬಹುದು, ಸಾಹಿತ್ಯ ಇರಬಹುದು, ಈ ತರಹ ಏನೇನೊ ತಿಳಿದುಕೊಳ್ಳುವ ಹಂಬಲ. ಈಗಿನ ಕಾಲದ್ದೇ ಅಲ್ಲ, ಎಷ್ಟೋ ವರ್ಷದ ಹಿಂದಿನ ಸಮಾಚಾರ, ಚರಿತ್ರೆ ಎಲ್ಲವೂ ಬೇಕು. ಇದಕ್ಕೆಲ್ಲ ಇಬ್ಬರಿಗೂ ಜೊತೆಯಾಗಿ ನಿಂತವರು ಅವರವರ ಒಡನಾಡಿಗಳು, ಇಬ್ಬರೂ ಎಲ್ಲಾ ವಿಷಯಗಳನ್ನೂ ಕಣ್ಮುಂದೆ ಚಿತ್ರ ರೂಪದಲ್ಲಾಗಲಿ, ಆಡಿಯೋ ರೂಪದಲ್ಲಾಗಿ ಬಿಚ್ಚಿಡುತ್ತಿದ್ದರು. ಹಾಗೆ ರೀಟಾ ಮತ್ತೆ ರಾಹುಲ್ ಇಬ್ಬರಿಗೂ ಅವರದೇ ಆದ ಎಷ್ಟೋ ಗುಂಪುಗಳಿದ್ದವು, ಜೊತೆಗೆ ಓದಿದವರು, ಕೆಲಸ ಮಾಡಿದವರು, ಕುಡಿದವರು, ಸ್ನೇಹಿತರು, ಅಡುಗೆಯ ಗುಂಪು, ಹಾಗೆ ಎಷ್ಟೋ. ಈ ಎಲ್ಲ ಗುಂಪಿನ ವಿಚಾರಗಳಲ್ಲೂ ರೀಟಾಗೆ ಸ್ಯಾಮ್ ಹಾಗೂ ರಾಹುಲ್‌ಗೆ ಸಂಗ್ ಜೊತೆಯಾಗುತ್ತಿದ್ದರು. ಯಾರಿಗೂ ಏನೂ ಮುಜುಗರವಾಗಲಿ, ತಲೆನೋವಾಗಲಿ ಇಲ್ಲ.

ರೀಟಾಗೆ ತನ್ನ ಯವ್ವನದ ಎಲ್ಲಾ ಆಸೆಗಳಿಗೂ ಜೊತೆಯಾಗಿದ್ದ ಸ್ಯಾಮ್. ಅವಳಿಗೆ ಬೇಕಾದಾಗೆಲ್ಲಾ ಅವನನ್ನು ಗಟ್ಟಿಯಾಗಿ ಹಿಡಿದು, ಕೆಲವೊಮ್ಮೆ ಎದೆಗೆ ಅಪ್ಪಿ ಮಲಗುತ್ತಿದ್ದಳು. ಅವನು ಒಂದು ದಿನವೂ ಬೇಡ ಅಂದವನಲ್ಲ. ಒಂದು ತರಾ ಹೇಳುವುದಾದರೆ ರೀಟಾಳ ಶೇಕಡಾ 90% ಭಾಗದಷ್ಟು ಆಸೆಗಳನ್ನು, ಬೇಡಿಕೆಗಳನ್ನು ಪೂರೈಸುತ್ತಿದ್ದ. ರಾಹುಲ್‌ಗೂ ಹೀಗೆ. ಅವನ ಒಡನಾಡಿ ಸಂಗ್. ಮೊದಲೇ ಹೇಳಿದಂತೆ ಇವರಿಬ್ಬರೂ ಪ್ರೀತಿಸಿದವರನ್ನು ಮದುವೆಯಾಗಲು ಸಾಧ್ಯವಿಲ್ಲಾ. ಅಕಸ್ಮಾತ್ ಮದುವೆಯಾದರೆ ಇಬ್ಬರಿಗೂ ಮಕ್ಕಳಾಗುವುದಿಲ್ಲ ಅಂತ ತಿಳಿದಿತ್ತು. ಹೀಗಿರುವಾಗ ಇಬ್ಬರೂ ಮದುವೆಗೆ ಬೇರೆ ಹುಡುಗ ಹುಡುಗಿಯನ್ನು ನೋಡುತ್ತಿದ್ದರು. ಆದರೆ ಅವರ ದೊಡ್ಡ ಯೋಚನೆ ಅಂದರೆ ಈಗಿರುವ ಸಂಗಾತಿಗಳಂತೆ ಮದುವೆಗೆ ಯಾರೂ ಸಿಗಲಾರರಲ್ಲ ಅಂತ.

ಬದುಕಿನ ಪಾಠ, ಏಷ್ಟೋ ಜನರ ಸಾಧನೆಯ ಹಾದಿ, ಹುಷಾರಿಲ್ಲದಿದ್ದರೆ ಮನೆಯ ಮದ್ದು ಇವೆಲ್ಲವನ್ನೂ ರೀಟಾಳಿಗೆ ಮನತಟ್ಟುವಂತೆ ಹೇಳುತ್ತಿದ್ದ, ತೋರಿಸುತಿದ್ದ ಸ್ಯಾಮ್. ಹಾಗೆಯೆ ರಾಹುಲ್‌ಗೆ ತನ್ನ ಬಾಸ್ ಒಂದಿಗೆ, ಟೀಮ್ ಒಂದಿಗೆ, ಜೀವನದ ಧ್ಯೇಯದ ಬಗ್ಗೆ ಸಂಗ್ ಅರ್ಥೈಸುತ್ತಿದ್ದಳು.

ದೈವಾನುಗ್ರಹವೋ, ಜಾತಕ ಫಲವೋ, ಅಥವಾ ಅವರಿಬ್ಬರ ಹಣೆಯ ಬರಹವೋ, ರೀಟಾ ಮತ್ತು ರಾಹುಲ್ ಬೇರೆ ಬೇರೆ ಮದುವೆಯಾದರು. ಮದುವೆಯಾದ ಎರಡು ಮೂರು ವರ್ಷ ತಮ್ಮ ತಮ್ಮ ಪ್ರೇಮಿಗಳನ್ನು ಪೂರ್ತಿ ಮರೆಯಲಾಗಲಿಲ್ಲ ಆದರೆ ಸಾಕಷ್ಟು ದೂರವೇ ಇಟ್ಟಿದ್ದರು ಇಬ್ಬರೂ. ಅನ್ಯೋನ್ಯವಾಗಿದ್ದರು. ಒಂದು ಜೋಡಿಯ ಮಾದರಿಯೂ ಆಗಿದ್ದರು. ನಂತರ ಒಂದು ಮಗುವಾಯಿತು. ಮಗುವಿನೊಡನೆ ಸಂತೋಷವಾದ ಕಾಲ, ಆಫೀಸ್ ಮತ್ತೆ ಮನೆ ಕೆಲಸದಲ್ಲಿ ಇಬ್ಬರೂ ತಲ್ಲೀನರಾದರು. ಮಗುವಾಗಿ ಒಂದೆರಡು ವರ್ಷದಲ್ಲೇ ಇಬ್ಬರಿಗೂ ಏಕೋ ಈ ಜೀವನ ಒಂದು ತರಹ ಮೊನಾಟನಿ ಅನ್ನಿಸಿಬಿಟ್ಟಿತು. ಸ್ವಲ್ಪ ಸ್ವಲ್ಪವಾಗಿ ಇಬ್ಬರು ಅವರವರ ಪ್ರೇಮಿಗಳ ಜೊತೆ ಹೆಚ್ಚು ಕಾಲ ಕಳೆಯಲಿಚ್ಚಿಸಿದರು. ಪ್ರೇಮಿಯ ಜೊತೆ ಇದ್ದಾಗ ಎಲ್ಲಾ ಹೊಸತನ, ಹೊಸ ವಿಚಾರ, ಎಲ್ಲಾ ಹೊಸತೇ. ಕಾಲ ಕಳೆದಂತೆ ಲೋಕಕ್ಕೆ ಇಬ್ಬರೂ ಮದುವೆಯಾದವರು ಆದರೆ ಇಬ್ಬರೂ ತಮ್ಮ ಮದುವೆಯ ಸಂಬಂಧಕ್ಕಿಂತ, ತಮ್ಮ

ತಮ್ಮ ಪ್ರೇಮಿಗಳ ಜೊತೆ ಕಾಲ ಕಳೆಯುವುದು ಇಷ್ಟಪಡುತ್ತಿದ್ದರು.

ಈ ರೀಟಾಳ ಪ್ರಿಯತಮನ ಅಕ್ಕರೆಯ ಹೆಸರು ಸ್ಯಾಮ್ ಆದರೆ ಅವನ ಪೂರ್ತಿ ಹೆಸರು ಏನು ಗೊತ್ತೆ? ಸ್ಯಾಮ್ಸಂಗ್ ಗ್ಯಾಲಕ್ಸಿ ನೋಟ್ 10+, ಹಾಗೆ ರಾಹುಲ್‌ನ ಪ್ರಿಯತಮೆಯ ಪೂರ್ತಿ ಹೆಸರು ಸ್ಯಾಮ್ಸಂಗ್ ಖ9, ಸಂಗೀತ ಅಲ್ಲ.

ಈ ಪರಿಸ್ಥಿತಿಯಲ್ಲಿ ಇಬ್ಬರೂ ಸುಮ್ಮನೆ ಹಾಗೆ ಗೂಗಲ್ ಮಾಡಿದರೆ, ವಿಚಿತ್ರ ಮದುವೆ ಸಂಗತಿಗಳು ಹೊರಬಿದ್ದುವು. ಮೊಬೈಲನ್ನೇ ಮದುವೆಯಾದವರಿದ್ದಾರೆ, ಮರ ಮದುವೆಯಾದವರಿದ್ದಾರೆ, ಗೋಡೆ (ಬರ್ಲಿನ್ ವಾಲ್), ಈಫಿಲ್ ಟವರ್, ನಾಯಿ, ಈ ತರಹ ಏನೇನೊ ಸಾಂಗೋಪಾಂಗವಾಗಿ ಸಂಪ್ರದಾಯದ ಪ್ರಕಾರ ಮದುವೆಯಾದವರಿದ್ದಾರೆ ಅಂತ ತಿಳೀತು. ಈಗ ರೀಟಾ ಮತ್ತು ರಾಹುಲ್‌ರ ಯೋಚನೆ ಏನೋ ಗೊತ್ತಿಲ್ಲ.

*ಪೂರ್ತಿ ಹೆಸರುಗಳು ಗೊತ್ತಾದ ಮೇಲೆ ಇನ್ನೊಂದು ಸಲ ಓದುತ್ತೀರಿ ಎಂಬ ನಂಬಿಕೆ.

ವಿಶೇಷ ಸೂಚನೆ : ಮೊಬೈಲ್ ಬಳಸುವರಿಗೆ ಸುಲಭವಾಗಿ ಅರ್ಥ ಆಗುವುದು ■

# ವಿಹಾರ

**ಸಂಪಟೂರು ವಿಶ್ವನಾಥ್**

– ಇಂಗ್ಲಿಷ್‌ನವರು ಏಕೆ ಅಷ್ಟು ಟೀ ಕುಡಿಯುತ್ತಾರೆ ಅಂತ ಆಶ್ಚರ್ಯಪಡುತ್ತಿದ್ದೆ. ಒಂದು ದಿನ ಅವರ ಕಾಫಿಯನ್ನು ಕುಡಿದೆ.

– ದೂರ ಪ್ರಯಾಣಕ್ಕೆ ಹೋಗುವಾಗ ಮನೆಯ ಮುಂದಿನ ಬಾಗಿಲನ್ನು ಭದ್ರಪಡಿಸಲು ಕಾಳಜಿ ವಹಿಸೊಲ್ಲ, ನಮ್ಮ ಬೆಲೆ ಬಾಳುವ ವಸ್ತು, ವಸ್ತ್ರಗಳೆಲ್ಲಾ ಕಾರಿನ ಹಿಂದಿನ ಸೀಟಿನ ಹಿಂದೆಯೇ ಇರುತ್ತದೆ, ಅಥವಾ ನಮ್ಮ ಮೈ ಮೇಲೇ ಇರುತ್ತದೆ.

– ವಾರ್ಷಿಕ ಪ್ರವಾಸಕ್ಕೆ ನೇಪಾಳಕ್ಕೆ ಹೋಗುವುದೋ, ಅಂಡಮಾನಿಗೆ ಹೋಗುವುದೋ ಎಂದು ಬಿಸಿಬಿಸಿ ಚರ್ಚೆಯಾಯಿತು. ನಮ್ಮ ಮನೆಯಲ್ಲಿ, ಅಂತಿಮವಾಗಿ ನಮ್ಮ ಸಾಮಾನು ಸರಂಜಾಮು ನೇಪಾಳಕ್ಕೆ ಹೋಯಿತು, ನಾವು ಅಂಡಮಾನ್‌ಗೆ ಹೋದೆವು.

# ಲೀಗಲ್ ನೋಟೀಸಿನ ಸೊಗಸು

● ಎಚ್.ಆರ್.ಹನುಮಂತರಾವ್

**--ಜಂಗಮ ಪೇಟ ಪೆದ್ದುಲ ಗೋವಿಂದಯ್ಯ ಹಾಗು**
**ಕುಮಾರಿ ಸುವರ್ಣಸುಂದರಿ ಇವರುಗಳಿಗೆ**
**ರಂಗನಾಥಪುರ ಸಂಕಟೇಶಯ್ಯ ಕೊಡುತ್ತಿರುವ**
**ಲೀಗಲ್ ಪೂರ್ವಭಾವೀ ನೋಟೀಸ--**

ಮಾವೇರಿ ತಾಲೂಕ, ಉಪ್ಪಿನಗಂಗಾಪುರ ಹೋಬಳಿ, ಬೊಮ್ಮನ ಹಳ್ಳಿ ಗ್ರಾಮದಲ್ಲಿ ಜನಿಸಿ ಇದೀಗ ರಂಗನಾಥಪುರ ನಿವಾಸಿಯಾದ **ಪೇರಳೆ ಮುದ್ದೇಶಪ್ಪ ಸಂಕಟೇಶಯ್ಯ** --ಇವರು ಈ ದಿನ ದುರ್ಮುಖಿ ಸಂವತ್ಸರದ ಜ್ಯೇಷ್ಠ , ಶುದ್ಧ, ಅಷ್ಟಮಿ, ಭಾನು ವಾರ, ಅಂದರೆ ಕ್ರಿ. ಶಕ ......ರಂದು  ಈ ಕೆಳಗೆ ಕಾಣಿಸಿದ---

-1. ಹಿರೇಕೆರೂರು, ಪೈಲ್ವಾನ್ ಜಗ್ನಾರಾಯಣ್ ದೋಢಾ ಗಲ್ಲಿ ಅಮಲ್ದಾರ್ ಅಂಬುಜಮ್ಮ ವಠಾರದ 27ನೇ  ನಂ. ಗೃಹದಲ್ಲಿ ವಾಸಿಸುತ್ತಿರುವ ಹಾಗು ಜಂಗಮ ಪೇಟೆ ಗೋವಿಂದಪ್ಪ ಬಡಾವಣೆಯಲ್ಲಿ ನವಜೀವನ ಪೈಲ್ಸ್‌ಅಂಡ್ ಪಿಸ್ತುಲಾ ಮತ್ತು ಮೂರ್ಛೆ ರೋಗ ಚಿಕಿತ್ಸ ಕ್ಲಿನಿಕ್ ನಡೆಸಿಕೊಂಡು ಬರುತ್ತಿರುವ **ನಾಮಾ ಬಂಗಾರ ಶೆಟ್ಟಿ ಕುಮಾರ ಪೆದ್ದುಲ ಗೋವಿಂದಯ್ಯ** ಹಾಗೂ ಅವರ ಹಿರೇಮಗಳಾದ

2. **ಮುದ್ದುಲ ಸಿಂಗಾರಿ ಉರ್ಫ ಸುವರ್ಣಸುಂದರಿ ಬಿನ್ ರಂಗನಾಯಕಿ** – ಅವರೆಲ್ಲೇ ಇದ್ದರೂ– ಅವರಿಗೆ ಕೊಡುತ್ತಿರುವ ಈ ನ್ಯಾಯಾಧಿಕಾರ ಪೂರ್ವ ಭಾವಿ ನೋಟೀಸ್ ಪ್ರಕಾರ ನಾನು ಖಡಾಖಂಡಿತವಾಗಿ ಹೇಳಬಯಸುವದೇನೆಂದರೆ –

1. ನಾನು **ಸಂಕಟೇಶಯ್ಯ** ಹಾಗು ಮೇಲೆ ಹೇಳಿದ ಮುದ್ದುಲ ಸಿಂಗಾರಿ ಉರ್ಫ ಸುವರ್ಣಸುಂದರಿ ಇಬ್ಬರೂ ಸುಮಾರು ಮೂರು–ನಾಲ್ಕು ವರುಷಗಳಿಂದ ನಮ್ಮ ಬಿ. ಎ. ಡಿಗ್ರಿಗಾಗಿ ಹಿರೇಕೆರೂರಿನ ಒಂದೇ ಕಾಲೇಜಿನಲ್ಲಿ ಓದುತ್ತಿರುವರಾಗಿದ್ದು, ಕಡೆ ಎರಡು ವರ್ಷಗಳಿಂದ ಇಬ್ಬರೂ ಪರಸ್ಪರ ಪ್ರೀತಿಸಿ, ಒಬ್ಬರೊನ್ನೊಬ್ಬರು ಗಾಢ ಪ್ರೇಮದಿಂದ ಕ್ಷಣವೂ ಬಿಟ್ಟಿರಲಾಗದಂಥ ಸ್ಥಿತಿಯಲ್ಲಿದ್ದವೆಂಬುದು ನಮಬ್ಬಿರ್ಗೆ ಅಲ್ಲದೆ ಆಕೆಯ ತಂದೆಯ ಸ್ಥಾನದಲ್ಲಿರುವ ಗೋವಿಂದಯ್ಯ ಹಾಗು ಇಡೀ ನಮ್ಮ ಕಾಲೇಜು ಸಮುದಾಯಕ್ಕೆ ಅರ್ಥಾತ ಇಡೀ ಊರಿಗೆ ಗೊತ್ತಿರುವ ಸಮಾಚಾರ.

2. ಇದೇ ಕಾರಣಕ್ಕೆ ನಾನು ನನ್ನ ವಿದ್ಯಾಭ್ಯಾಸದಲ್ಲಿ ಏರುಪೇರಾಗಿ, ಅವಳ ಸಂಗಕ್ಕಾಗಿ, ಹಾಗೂ ಅವಳಿಗೆ ಸಹಾಯ ಮಾಡಲು ಎಲ್ಲೆಲ್ಲಿ ಸಿಕ್ಕಿದ ನೋಟ್ಸಗಳು, ಪುಸ್ತಕಗಳನ್ನು ಕೊಡಿಸುವದರಲ್ಲಿ ನಿರತನಾಗಿ ಸ್ವಯಂ ಪರೀಕ್ಷೆಗಳಲ್ಲಿ ಎರಡೆರಡು ಬಾರಿ ಡುಮಕಿ ಹೊಡೆದಿದ್ದು ನನ್ನ ಪ್ರೇಮ ಅವಳಲ್ಲಿ ಯಾವ ಲೈಲಾ ಮಜನು, ಸೋನಿ ಮಹಿವಾಲ್, ದೇವ್ದಾಸ್ ಪಾರ್ವತಿಯರ ಮಟ್ಟಕ್ಕೆ ಕಡಿಮೆಯಿಲ್ಲವೆಂದು ಅಕ್ಷರಶ: ತೋರಿಸಿಕೊಟ್ಟಿದ್ದೇನೆ. ನಾನು ನಮ್ಮ ಹಿರಿಯರಿಂದ ಹಣ ತರಿಸಿಕೊಂಡು ಇವಳಿಗಾಗಿ ಕಂಡ ಕಂಡ ಹೋಟೆಲು, ಸಿನೆಮಾ, ವಿಹಾರ ಇತ್ಯಾದಿಗಳಿಗೆ ಅವಳನ್ನು ಮೆಚ್ಚಿಸಲು ಮಾಡುತ್ತಾ ಬಂದಿರುವುದು ಅವಳಿಗೂ ಅವಳ ಅಪ್ಪನಿಗೂ ನನ್ನ ಒಡನಾಡಿ ಸ್ನೇಹಿತರುಗಳಿಗೂ ತಿಳಿದಿರುವ ವಿಷಯ. ಅವಳಿಗೆ ಬಹಳವೇ ಪ್ರಿಯವಾದ ಚಾಕೊಲೇಟ್ ಐಸ್ಕ್ರೀಮ್,

ಜಾಂಗೀರ ಹಾಗು ಬಾದುಷಾ ಇತ್ಯಾದಿ ನಾನು ಕೊಡಿಸಿರುವುದನ್ನು ಲೆಕ್ಕ ಹಾಕುವುದು ಸಭ್ಯತೆ ಅಲ್ಲವೆಂದು ಈ ಮೂಲಕ ಹೇಳಬಯಸುತ್ತೇನೆ. ಇನ್ನೂ ಒಂದು ಮುಖ್ಯ ವಿಷಯವೆಂದರೆ ಅವಳನ್ನು ಕೆಣಕಿ ಗೋಳಾಡಿಸಿ ಹಿಂಸಿಸಲು ಅನೇಕ ರೌಡಿಗಳ ಗುಂಪೇ ಅವಳ ಹಿಂದೆ ಬಿದ್ದಾಗ ನಾನು ಅವಳಿಗೆ ಗೋಡೆಯಾಗಿ ನಿಂತು ಅವರುಗಳಿಂದ ಬಚಾಯಿಸಿದ್ದೇನೆ. ಹಾಗೆಂದು ನಾನೇನು ಅಮಿತಾಬ್ ಬಚ್ಚನ್ ಎಂದು ಎದೆ ತಟ್ಟುಕೊಳ್ಳುತ್ತಿಲ್ಲ, ಆದರೆ ಒಬ್ಬ ಭಾರತದ ಸತ್ಪ್ರಜೆಯಾಗಿ ನನ್ನ ಪ್ರಥಮ ಕಾರ್ಯ ಅದೇ ಎಂದು ನಿರ್ವಹಿಸಿದ್ದೇನೆ. ಇದು ಅವಳಿಗಾಗಲಿ ಅವಳ ಮುದ್ದಿನ ಅಪ್ಪನಿಗಾಗಲಿ ತಿಳಿದಿರಲೇಬೇಕಾದ ವಸ್ತುನಿಷ್ಟ ವಿಷಯ. ನಾವಿಬ್ಬರು ಒಂದು ಬಾರಿ ನಮ್ಮದು ಅಮರ ಪ್ರೇಮವೆಂದು ಹೇಳಿ ನನ್ನ ಕೈಯ್ಯಲ್ಲಿ ಅವಳ ಹೆಸರನ್ನು ಆಕೆಯೇ ಹಚ್ಚೆ ಹಾಕಿಸಿದ್ದು ಈಗಲೂ ಎದ್ದುಕಾಣುತ್ತಿದೆ.

3. ಕಳೆದ ವರುಷ ನನ್ನ ಜೀವನದಲ್ಲಿ ಸಾಕಷ್ಟು ಬದಲಾವಣೆ ಕಂಡಿದ್ದೇನೆ. ದೈವೇಚ್ಛೆ ಜೊತೆಗೆ ಮಾನವ ಕೃತ ಕೃತಕ ಸನ್ನಿವೇಶಗಳಿಂದಾಗಿ ನಾನು ಜರ್ಜತನಾಗಿದ್ದೇನೆ. ನನ್ನ ತೀರ್ಥರೂಪರು ನನ್ನ ವಿದ್ಯಾಭ್ಯಾಸ ಸರಿಯಾಗಿ ನಡೆಯಿಲಿಲ್ಲವೆಂಬ ಕೊರಗು ಜೊತೆಗೆ ನನ್ನ, ಇವಳ ಪ್ರೇಮ ಪ್ರಸಂಗ ಅವರಿಗೆ ವಿಕೃತವಾಗಿ ತೋರಿ ಅದೇ ದು:ಖದಲ್ಲಿ ದೈವಾಧೀನರಾದದ್ದಲ್ಲದೆ ನಮ್ಮ ಕುಟುಂಬದ ಆಸ್ತಿ ವಿತರಣೆಯಾಗಿ ನನ್ನ ಪಾಲಿಗೆ ಏನು ದೊರೆತಿಲ್ಲವೆಂಬ ವಿಷಯ ನನಗೆ ವ್ಯಸನಕ್ಕೆ ತಳ್ಳಿದ್ದು, ಅದನ್ನೇ ನನ್ನ ಪ್ರೇಮಿಯೆಂದು ತಿಳಿದಿದ್ದ ಸುವರ್ಣ ಸುಂದರಿಗು ತಿಳಿದು ನನ್ನಿಂದ ದೂರವಾಗಿದ್ದಾಳೆ. ಆಕೆ ಎಲ್ಲ ಪರೀಕ್ಷೆಗಳಲ್ಲೂ ಹೆಚ್ಚು ಅಂಕಗಳನ್ನು ಪಡೆದು ಇದೀಗ ಹೆಚ್ಚಿನ ವ್ಯಾಸಂಗಕ್ಕೆ ಬೇರೆಯೇ ವಿದ್ಯಾಲಯ ಆರಿಸಿ ಹೋಗಿದ್ದಾಳೆ, ಹೋಗಲಿ, ಸಂತೋಷದ ವಿಷಯ. ಆದರೆ ನಾನು ಮತ್ತೆ ಮತ್ತೆ ಅದೇ ಹಳೆ ಕಾಲೇಜಿನಲ್ಲೇ 'ಶತಾಯ ಗತಾಯ' ಎನ್ನುವಂತೇ ಇದ್ದಲ್ಲೇ ಇದ್ದು ನನ್ನ ಬಾಳು ಕತ್ತಲಾಗಿದೆ. 'ಗಾಯದ ಮೇಲೆ ಬರೆ' ಎನ್ನುವಂತೆ ಇದೀಗ ಆಕೆ ನನ್ನ ನೋಡಿ ಮಾತಾಡಿಸುವುದಿರಲಿ, ಎದುರಿಗೆ ಸಿಕ್ಕರೆ ನನ್ನ ಪರಿಚಯವೇ ಇಲ್ಲದಂತೆ ನಟಿಸಿ ಹೋಗುತ್ತಾಳೆ, ಜೊತೆಗೆ ಬೇರೆ ಬೇರೆ ಹುಡುಗರೊಡನೆ ಜಾಲಿಯಾಗಿ ಸುತ್ತುತ್ತಾ ಅವರೊಡನೆ ವಿಹಾರ ಚಕ್ಕಂದ ಮಾಡಿಕೊಂಡು ನನ್ನನ್ನ ಧೂಳಿಗೂ ಸಮವಲ್ಲವೆನ್ನುವಂತೆ ಹೋಗುತ್ತಾಳೆ. ನಾನೇ ಮಾತಾಡಿಸಲು ಹೋದರು ಸಾರಿ, ನೋ ಟೈಮ್ ಎಂದು ನಿಲ್ಲದೆ ಹೋಗೇ ಬಿಡುತ್ತಾಳೆ. ಅವಳ ಅಪ್ಪನ ಬಳಿ ಮಾತಾಡಲು ಹೋದರೆ, ಆತ ನನಗೂ ಅವಳಿಗೂ ಏನೂ ಸಂಬಂಧವಿರುವುದಿಲ್ಲ, ಆಕೆಯ ತಂಟೆಗೆ ಹೋದರೆ ಪೊಲೀಸರನ್ನು ಕರೆಸುತ್ತೇನೆ ಎಂದೆಲ್ಲ ದಬಾಯಿಸಿ ನನ್ನ ಅವನ ಮನೆಯಿಂದ ನಾಯಿಯನ್ನು ಹೊಡದಟ್ಟಿದಂತೆ ಮಾಡಿ ಅವಮಾನಿಸಿದ. ಇಷ್ಟೆಲ್ಲಾ ಅವಮಾನ ನುಂಗಿ ಅವಳಿಗೆ ಪ್ರೇಮ ಭಿಕ್ಷೆ ಬೇಡಿ ಕಾಗದ, ಮಿಂಚಂಚೆ ಮೂಲಕ ಕಳುಹಿಸಿದರೆ ಆಕೆ ಎಲ್ಲವನ್ನು ತಿರಸ್ಕರಿಸಿ, ನೀನು ನನಗೆ ಯಾವ ಮಿತ್ರನು ಅಲ್ಲ, ನನ್ನ ತಂಟೆಗೆ ಬಂದರೆ ಆಗುವ ಮುಂದಿನ ಪರಿಣಾಮಗಳಿಗೆ ನಾವು ಕಾರಣರಲ್ಲ ಎಂದು ಉತ್ತರಿಸಿದ್ದಾಳೆ.

4. ಇದೀಗ ನಾನು ಎಲ್ಲವನ್ನು ಕಳೆದುಕೊಂಡು ಪ್ರೇಮದಿಂದಲೂ ವಂಚಿತನಾಗಿದ್ದೇನೆ. ನನ್ನ ಸುತ್ತಮುತ್ತಲು ಬರಿ ವಂಚಕರೇ ಇರುವರೋ ಅನಿಸುತ್ತದೆ. ನನಗೆ ಜೀವನ, ಬಾಳು ಅಹಸ್ಯವಾಗಿ ತೋರುತ್ತಿದೆ, ಅವಳಿಲ್ಲದ ಬಾಳು ನನಗೆ ಶೂನ್ಯ. ಆದ್ದರಿಂದ

ನನಗೆ ಉಳಿದಿರುವ ದಾರಿ ಒಂದೇ. ನ್ಯಾಯಾಲಯದ ಮೆಟ್ಟಲು. ಆದರೆ ಅಲ್ಲಿ ಏನೇನು ಯಾವ ಯಾವ ರೀತಿ, ಹೇಗೆ ಅದೆಷ್ಟು ವರುಷಗಳಿಗೆ ತೀರ್ಮಾನವಾಗುವುದೋ, ತಿಳಿಯದಾಗಿ ನಾನು ಈ ಕೆಳಗೆ ಕಂಡ ರೀತಿ ತೀರ್ಮಾನಕ್ಕೆ ಬಂದಿದ್ದೇನೆ.

5. ನನಗಾದ, ಖರ್ಚು, ವೆಚ್ಚ, ಮಾನಸಿಕ ವ್ಯಥೆ, ಆರೋಗ್ಯ ನಷ್ಟ (ಇದೀಗ ನಾನು ಯೋಚಿಸಿ ಯೋಚಿಸಿ, ಊಟ ತಿಂಡಿ ಇತ್ಯಾದಿ ಎಲ್ಲ ಸರಿಯಾಗಿ ಮಾಡಲಾಗದೆ ಕೆಮ್ಮು, ದಮ್ಮು, ಉಸಿರಿನ ತೊಂದರೆ ಇತ್ಯಾದಿ) ದಿನೇ ದಿನೇ ಕೆಡುತ್ತಿದ್ದು, ಅದರಿಂದಾಗುವ ಎಲ್ಲ ನಷ್ಟಗಳಿಗೂ ಇವಳು, ಇವಳ ಅಪ್ಪನು ಕಾರಣರಾಗಿ, ಮುಂದಾಗುವ ಅನಾಹುತಗಳಿಗೆ ಅವರಿಬ್ಬರೇ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ ಎಂಬ ವಿಷಯ ಈ ನೋಟಿಸ್ ಮುಖೇನ ತಿಳಿಯಪಡಿಸುತ್ತಿದ್ದೇನೆ. ಮುಂದೆ ನ್ಯಾಯಸ್ಥಾನದಲ್ಲಿ ಇವರುಗಳು ಕಡ್ಡಾಯವಾಗಿ ಹಾಜರಾಗಬೇಕಾದ ಸಂದರ್ಭಕ್ಕೆ ಕಾರಣರಾಗುತ್ತಾರೆ.

6. ನನ್ನ ಆರೋಗ್ಯ ಪೂರ ಕೆಟ್ಟು, ನನ್ನ ಮಾನಸಿಕ ಪರಿಸ್ಥಿತಿ ಹದಗೆಟ್ಟು ನಾನು ಆತ್ಮಹತ್ಯೆ ಮಾಡಿಕೊಂಡಿದ್ದೇ ಆದರೆ ಅದಕ್ಕೆ ಇವಳೇ ಕಾರಣವಲ್ಲದೇ ಬೇರೆ ಯಾರು ಅಲ್ಲ ಎಂದು ಈ ನೋಟೀಸ್ ಮೂಲಕ ಗಂಟಾಘೋಷವಾಗಿ ತಿಳಿಸಬಯಸುತ್ತೇನೆ.

ಅ. ಮುಂದೆ ಕೋರ್ಟಿನಲ್ಲಿ ವಿಚಾರಣೆ ನಡೆದು ನನ್ನ ಪರವಾಗಿ ತೀರ್ಪು ಬಂದು ಕೋರ್ಟ್ ಮೂಲಕ ಕಟ್ಟಿಕೊಡಬೇಕಾದ ಖರ್ಚು ವೆಚ್ಚ ಇತ್ಯಾದಿಗಳಿಗೆಲ್ಲ ಇವರಿಬ್ಬರೇ ಕಾರಣರಲ್ಲದೆ ಮತ್ತು ಯಾರೂ ಆಗಿರುವುದಿಲ್ಲವೆಂದು ಈ ನೋಟಿಸ್ ಮೂಲಕ ಖಡಾಖಂಡಿತವಾಗಿ ತಿಳಿಸಬಯಸುತ್ತೇನೆ.

ಸಂಬಂಧ ಪಟ್ಟವರೆಲ್ಲ ಈ ಮೂಲಕ ತಿಳಿದಿರುವಂತವರಾಗಲಿ.

■

---

## ಏನಾದರೂ ಆಗು

ಏನಾದರೂ ಆಗು
ಮೊದಲು ಮಂತ್ರಿ ಆಗು
ಇದು ಈಗಿನ ರಾಜಕಾರಿಣಿಗಳ ಮಂತ್ರ
ವಿದ್ಯೆ ಇಲ್ಲದಿದ್ದರೂ ವಿದ್ಯಾ ಮಂತ್ರಿ
ಲಾ ಓದಿಲ್ಲದಿದ್ದರೂ ಕಾನೂನು ಮಂತ್ರಿ
ಕಳ್ಳ ಪೋಲೀಸ್ ಆಟ ಆಡುತ್ತಿದ್ದವನು ಗೃಹ ಮಂತ್ರಿ
ಇಷ್ಟಿರುವಾಗ ಓದು ಏತಕೆ ಬೇಕು
ಮಂತ್ರಿಗಿರಿಯೇ ಸಾಕು

# ದೊಡ್ಡೋರಾದ್ಮೇಲೆ!

● ಎಚ್. ಶಾಂತರಾಜ ಐತಾಳ

'ನೀನು ದೊಡ್ಡೋನಾದ್ಮೇಲೆ ಏನಾಗ್ತಿ ಮರಿ?'– ಇದು ಸಾಮಾನ್ಯವಾಗಿ ಶಾಲಾ ಮಕ್ಕಳಿಗೆ ಅವರಿಗಿಂತ ಹೆಚ್ಚಿಗೆ ಪ್ರಾಯವಾದವರು ಕೇಳುವ ಪ್ರಶ್ನೆ. ಹೀಗೆ ಕೇಳುವವರು ಹೆಚ್ಚಾಗಿ ಏನೂ ಆಗಿರುವುದಿಲ್ಲ. ದೊಡ್ಡವರಾಗಿರ್ತಾರೆ ಅಷ್ಟೆ! ಬೈ ವರ್ಚೂ ಆಫ್ ಏಜ್' –ಅಂತಾರಲ್ವ ಹಾಗೆ.

ನಾನು ಅಷ್ಟೆ– ಆ ಒಂದು ಪ್ಲಸ್ ಪಾಯಿಂಟ್ ಇಟ್ಕೊಂಡು ಒಬ್ಬ ಚೋಟೂನ್ನೆ ಕೇಳಿದೆ– 'ಏನಾಗ್ತೀಯ ದೊಡ್ಡದಾದ್ಮೇಲೆ'–ಅಂತ. 'ನಾನು ಅಪ್ಪನ ಹಾಗೆಯೇ ಇಂಜಿನಿಯರ್ ಆಗ್ತೀನಿ'

'ಓ, ನಿಮ್ಮಪ್ಪ ಇಂಜಿನಿಯರ್ರಾ?'

'ಇಲ್ಲ. ಅವರೂ ಇಂಜಿನಿಯರ್ ಆಗಬೇಕು ಅಂದ್ಕೊಂಡಿದ್ರಂತೆ' ಅಂದು ಬಿಟ್ರು –ನನಗೆ ಹೇಗೆ ಪ್ರತಿಕ್ರಿಯೆ ನೀಡಬೇಕೋ ತಿಳಿಯಲಿಲ್ಲ.

ಹಾಗಂತ ಜೀವನದಲ್ಲಿ ಯಶಸ್ಸು ಗಳಿಸಿದವರೆಲ್ಲ ಚಿಕ್ಕ ವಯಸ್ಸಿನಲ್ಲಿ ತಮ್ಮನ್ನು ಸಿದ್ಧಗೊಳಿಸುತ್ತಿರಲಿಲ್ಲವೆಂದೇನು ಅರ್ಥವಲ್ಲ. ಹಿಮಾಲಯದ ತುತ್ತತುದಿಯನ್ನೇರಿ ವಿಜೃಂಭಿಸಿದ ತೇನ್‌ಸಿಂಗರನ್ನು ಯಾರೋ ಅಭಿನಂದಿಸಿದಾಗ ಅವರು ನುಡಿದಿದ್ದರಂತೆ. 'ಹಿಮಾಲಯದ ತುದಿಯನ್ನು ನಾನೀಗ ಏರಿದ್ದೇನೆ. ಆದರೆ ನನ್ನ ಹತ್ತನೇ ವಯಸ್ಸಿನಲ್ಲೇ ನನ್ನ ಮನಸ್ಸೆಂಬ ಕುದುರೆ ಅದನ್ನು ಹತ್ತಿಯಾಗಿತ್ತು'–ಎಂದು.

ಅಂದರೆ ಏನರ್ಥ ಎಂದು ಕುತೂಹಲಿಗಳು ಕೇಳಿದಾಗ ತೇನ್ ಸಿಂಗರ ಉತ್ತರತುಂಬ ಮಾರ್ಮಿಕವಾಗಿತ್ತಂತೆ. 'ಹಿಮಾಲಯದ ತಪ್ಪಲಿನಲ್ಲಿ ವಾಸಿಸುತ್ತಿದ್ದವರು ನಾವು' ನಾನು ಎಳೆಯ ಬಾಲಕನಾಗಿರುವಾಗಲೇ ನನ್ನ ತಾಯಿ ಈ ಪರ್ವತರಾಜನನ್ನು ತೋರಿಸಿ, –ನೋಡು ನೀನು ಬೆಳೆದು ದೊಡ್ಡವನಾದ ಮೇಲೆ ಈ ಪರ್ವತದ ತುದಿಯವರೆಗೂ ಏರಬೇಕು–ಎಂದು ಪ್ರೋತ್ಸಾಹದ ಮಾತುಗಳನ್ನಾಡುತ್ತಿದ್ದಳು. ನನ್ನ ಮನದಲ್ಲಿ ಆಗಲೇ ಈ ಸಂಕಲ್ಪ ಮೂಡಿಯಾಗಿತ್ತು. ಅದನ್ನು ಇಷ್ಟು ವರ್ಷದ ಮೇಲೆ ಸಾಧಿಸಲು ಸಾಧ್ಯವಾಯಿತು' –ಎಂದು ಅವರು ನುಡಿದಾಗ ಕೇಳುಗರ ಮನದಲ್ಲಿ ಇಚ್ಛಾಶಕ್ತಿಯ ಬೆನ್ನಿಗೆ ಕ್ರಿಯಾಶಕ್ತಿಯೂ ಇದ್ದರೆ ಏನನ್ನೂ ಸಾಧಿಸಬಹುದು –ಎಂಬ ಭಾವನೆ ಮೂಡಿತಂತೆ.

ಮಕ್ಕಳ ಮುಂದೆ ಹಿರಿಯರು ಪದೇ ಪದೇ–ನೀನು ದೊಡ್ಡೋನಾದ ಮೇಲೆ ಅಬ್ದುಲ್ ಕಲಾಂ ತರ ವಿಜ್ಞಾನಿಯಾಗಬೇಕು ತಿಳೀತಾ–ಅಂತಲೋ; ನೀನು ದೊಡ್ಡ ಡಾಕ್ಟರಾಗಿ ನಮಗೆಲ್ಲ ಮದ್ದುಕೊಡುವಂತಾಗಬೇಕು ಅಂತಲೋ –ಹೇಳಿದಾಗ ಅವರೂ ಇತರರ ಮುಂದೆ ಇದೇ ಉರು ಹೊಡೆದ ಮಾತುಗಳನ್ನು ಹೇಳಿಯಾರು –ಆದರೆ ಅವರಷ್ಟಕ್ಕೇ ಸ್ವಂತ ಬುದ್ಧಿಯಿಂದ ಹೇಳೋದಾದರೆ –ನಾನು ಪೋಲಿಸ್ ಆಗ್ತೇನೆ – ಪೀ ಪೀ ಅಂತ ಸೀಟಿ ಹೊಡೆದು ರಸ್ತೆಯಲ್ಲಿ ದೊಡ್ಡ ಬಸ್‌ಗಳನ್ನು ನಿಲ್ಲಿಸ್ತೇನೆ – ಎಂಬ ತಮ್ಮ ಧ್ಯೇಯವನ್ನು ಬಿಚ್ಚಿಟ್ಟಾರು. ಇನ್ನು ಅವರ ಆದರ್ಶ ವ್ಯಕ್ತಿಗಳೆಂದರೆ – ಅಂಚೆಯಣ್ಣ, ಟಿಕೇಟ್‌ಗಳನ್ನು ಹರಿದು ಸಿನಿಮಾ ನೋಡಲು ಅನುಮತಿ ನೀಡುವ

ಗೇಟ್‌ಕೀಪರ್. ಬಸ್ ಡ್ರೈವರ್, ಶಾಲೆಯಲ್ಲಿ ಲಾಂಗ್ ಬೆಲ್ ಹೊಡೆದು ಮಕ್ಕಳೆಲ್ಲ ಕೇಕೆ ಹಾಕಿ ಮನೆಗೋಡುವಂತೆ ಮಾಡುವ ಶಾಲೆಯ ಅಟೆಂಡರ್ –ಇವರೆಲ್ಲ.

ತಾನು ಧೋನಿ ಆಗ್ತೇನೆ –ಎಂದು ಹೇಳಿದ ಹುಡುಗನೊಬ್ಬ ಒಮ್ಮೆ ಧೋನಿ ಶೂನ್ಯರನ್ನಿಗೆ ಔಟಾದಾಗ –ಇಲ್ಲ, ಇಲ್ಲ ನಾನು ಬೌಲ್ಡ್ ಆಗ್ತೇನೆ –ಎಂದು ಅವನನ್ನು ಔಟ್ ಮಾಡಿದ ಬೌಲರ್‌ನ ಪರ ಪಕ್ಷಾಂತರ ಮಾಡಿದ್ದ. ಕರೀನಕಪೂರ್ ಆಗುತ್ತೇನೆ –ಎಂದು ಹೇಳಿದ ಹುಡುಗಿಯೊಬ್ಬಳು ಆ ತಾರೆಗೆ ಮಗುವಾದ ಮೇಲೆ ಬೇಡ, ಬೇಡ ನಾನು ನಟಿ ಆಗೋದಿಲ್ಲ–ಎಂದು ತೀರ್ಮಾನ ಮಾಡಿದ್ದಳು. ಹಾಗಾದರೆ ಏನಾಗಲಿಕ್ಕೆ ಆಶೆ ನಿನಗೆ ಎಂದು ಮತ್ತೆ ಕೇಳಿದಾಗ–ನಾನು ಆನೆ ಆಗುತ್ತೇನೆ ಅಂಕಲ್; ಸೊಂಡಿಲಿನಿಂದ ನಿಮ್ಮನ್ನೆಲ್ಲ ಎತ್ತಿ ಹಾರಿಸ್ತೇನೆ –ಎಂದು ಹೇಳಿ ನನ್ನನ್ನು ಬೆಚ್ಚಿ ಬೀಳಿಸಿದ್ದಳು.

ಕೆಲವು ಮಕ್ಕಳ ಯೋಚನಾ ಲಹರಿಯೇ ವಿಚಿತ್ರವಾಗಿರುತ್ತದೆ. ಇನ್ನೂ ಯು.ಕೆ.ಜಿ.ಯಲ್ಲಿದ್ದ ಮಗುವೊಂದು ಹೇಳ್ತಿತ್ತು– 'ನಾನು ದೊಡ್ಡೋಳಾದ್ಮೇಲೆ ಅಮ್ಮ ಆಗ್ತೇನೆ. ಆ ಮೇಲೆ ಪಾಪುನ ತೊಟ್ಟಿಲಲ್ಲಿ ತೂಗುತ್ತೇನೆ. ಮತ್ತೆ ಪುಟ್ಟ ಹುಟ್ತಾನೆ. ಅವ್ನೂ ಪ್ಲೇ ಸ್ಕೂಲಿಗೆ ಹೋಗ್ತಾನೆ– ನಾನು ಕೇಳಿದೆ. ಅರೆ, ಮತ್ತೆ ಮದುವೆ ಯಾವಾಗ ಆಗ್ತಿ ನೀನು?' ಅಂತ ಅದಕ್ಕೆ ಆ ಮಗು 'ಮದುವೆ ಬೇಡ ಅಂಕಲ್ –ನಾಚಿಕೆಯಾಗುತ್ತೆ –ಅಂದು ಬಿಡ್ತು.

ತಂದೆ, ತಾಯಿ ಇಬ್ಬರೂ ಕೆಲಸಕ್ಕೆ ಹೋಗಿ ಶಾಲೆಗೆ ಹೋಗುವ ಮಗು ಒಂದೇ ಮನೆಯಲ್ಲಿರುವುದು ನಗರ ಪ್ರದೇಶಗಳಲ್ಲಿ ಕಂಡು ಬರುವ ಸಾಮಾನ್ಯ ದೃಶ್ಯ. ಸಂಜೆ ಮನೆಗೆ ಬಂದ ಮೇಲೂ ತಾಯಿಗೆಅಡುಗೆ ಕೆಲಸವಾದರೆ ತಂದೆಯ ಕೈಯಲ್ಲಿ ಭದ್ರವಾಗಿ ಕೂತಿರುತ್ತದೆ ಆತನ ಸ್ಮಾರ್ಟ್ ಫೋನ್. ತಂದೆಯ ಪ್ರೀತಿಯ ಮಾತಿಗಾಗಿ ಹಾತೊರೆಯುತ್ತಿದ್ದ ಮಗುವನ್ನು ಯಾರೋ ಕೇಳಿದರಂತೆ –'ನೀನು ದೊಡ್ಡೋಳಾದ ಮೇಲೆ ಅಮ್ಮನ ಹಾಗೆ ಬ್ಯಾಂಕಿಗೆ ಹೋಗ್ತಿಯಾ ಅಲ್ಲ ಅಪ್ಪನ ಹಾಗೆ ಇಂಜಿನಿಯರ್ ಆಗ್ತೀಯಾ' –ಅಂತ. ಅದಕ್ಕೆ ಆ ಮಗು ತಾನೇ ಮುಗ್ಧವಾಗಿ ರಚಿಸಿದ ಒಂದು ಚಿತ್ರವನ್ನು ತೋರಿಸಿತಂತೆ. ಅದೊಂದು ಮೊಬೈಲ್ ಫೋನ್‌ನ ಚಿತ್ರ! ಯಾಕೆ ಹೀಗೆ ಎಂದು ಕೇಳಿದಾಗ ಆ ಮಗು, ನಾನೂ ಒಂದು ಮೊಬೈಲ್ ಫೋನ್ ಆದರೆ ಅಪ್ಪನ ಕೈಲಿ ಯಾವಾಗ್ಲೂ ಕೂತುಕೊಳ್ಳಬಹುದು; ಮಾತಾಡಬಹುದು –ಅಲ್ವಾ' ಎಂದು ಹೇಳಿ ಅಪ್ಪನ ಮನ ಕಲುಕುವಂತೆ ಮಾಡಿತಂತೆ.

ಕೆಲವು ಮಕ್ಕಳಿಗೆ ಒಂದೇ ಸಲ ಅಜ್ಜ ಆಗಿ ಬಿಡಬೇಕೆಂಬ ಆಸೆ. ಅಜ್ಜನ ಕಣ್ಣು ತಪ್ಪಿಸಿ, ಅವರಕೋಣೆಗೆ ನುಗ್ಗಿ, ಅವರ ಕನ್ನಡಕ, ಶ್ರವಣ ಸಾಧನ, ಹಲ್ಲಿನ ಸೆಟ್, ವಾಕಿಂಗ್ ಸ್ಟಿಕ್ ಇವುಗಳ ಸದ್ಬಳಕೆ ಮಾಡಲುಯತ್ನಿಸುವ ಪುಟಾಣಿಗಳಿವು! ಈ ಸಾಧನಗಳೆಲ್ಲ ತಮಗೇ ಸಿಗಬೇಕಾದರೆ ತಾವೂ ಅಜ್ಜ ಆಗಿಬಿಟ್ರೆ ಸಾಕಲ್ಲ –ಎಂಬ ದೂರಾಲೋಚನೆ ಇವುಗಳದು!

ಐದನೇ ಕ್ಲಾಸಿನಲ್ಲಿ ಓದುತ್ತಿದ್ದ ಹುಡಗನೊಬ್ಬ 'ನಾನು ದೊಡ್ಡೋನಾದ್ಮೇಲೆ ವಿದ್ಯಾಮಂತ್ರಿ ಆಗ್ತೀನಿ'–ಎಂದು ಎಲ್ಲರೊಡನೆ ಮೇಲಿಂದ ಮೇಲೆ ಹೇಳುತ್ತಾ ತಿರುಗುತ್ತಿದ್ದ. ಒಮ್ಮೆ ಆತನ ಅಪ್ಪನೇ ಸ್ವಲ್ಪ ಗರಂ ಆಗಿಯೇ ಕೇಳ್ತಾರಂತೆ'–ಯಾಕೋ ಈಗಲೇ ನಿನಗೆ ವಿದ್ಯಾಮಂತ್ರಿ ಆಗಬೇಕು ಅನ್ನೋ ಕನಸು! ಮೊದಲು ಒಳ್ಳೇ

ಮಾರ್ಕ್ ತಗೊಂಡು ಪಾಸಾಗು–ರಾಜಕಾರಣ ಎಲ್ಲ ನಿನಗೆ ಯಾಕೆ ಬೇಕು? – ಅಂತ.

ಅದಕ್ಕೆ ಈ ಭಾವೀ ಸಚಿವನ ಬಳಿ ರೆಡಿಮೇಡ್ ಉತ್ತರವಿತ್ತಂತೆ –'ಮತ್ತೆ ನೀನು ಮೊನ್ನೆ ಅಮ್ಮನ ಹತ್ರ ಹೇಳ್ತಾ ಇದ್ದಿಯಲ್ಲ –ಈಗಿನ ವಿದ್ಯಾಮಂತ್ರಿಗಳು ಐದನೇ ಕ್ಲಾಸಿನಲ್ಲಿ ಢುಂಕಿ ಹೊಡೆದವರಾದರೂ ಒಳ್ಳೆ ಹಣ ಮಾಡಿ ಬಿಟ್ರು'– ಅಂತ– ನನಗೂ ಕ್ಲಾಸ್‌ಟೀಚರ್ ಹೇಳ್ತಾನೆ ಇದ್ದಾರೆ. 'ನೀನೀಸಲ ಫೇಲಾಗೋದು ಗ್ಯಾರಂಟಿ– ಅಂತ. ಹಾಗಾದ್ರೆ ನಾನೂ ವಿದ್ಯಾಮಂತ್ರಿ ಆಗಿ ಬಿಡಬಹುದಲ್ವ?' ಕುಮಾರ ಕಂಠೀರವನ ಮಾತೂ ಕೇಳಿ ಅಪ್ಪ 'ಕ್ಲೈಕಟ್ ಬಾಯ್ಕುಚ್' ಆಗಿ ಬಿಟ್ರಂತೆ.

ನನ್ನ ಮನಸ್ಸಿನಲ್ಲಿ ಯಾವಾಗಲೂ ಮರುಕಳಿಸುವ ಘಟನೆಎಂದರೆ ನಮ್ಮ ಪೈಕಿಯ ಖ್ಯಾತ ನೇತ್ರತಜ್ಞರ ಮಗನ ಜತೆ ನಾನು ನಡೆಸಿದ ಮುಖಾಮುಖಿ. ಮೂರುಚಕ್ರದ ಸೈಕಲ್ ತುಳಿತಿದ್ದ ಈ ಬಾಲಕನನ್ನು ನಾನೊಮ್ಮೆ ಕೇಳಿದ್ದೆ.

'ನೀನು ದೊಡ್ಡೋನಾದ ಮೇಲೆ ಏನಾಗ್ತಿ' ಅಂತ. ಅದಕ್ಕಾತ ತನ್ನದೇ ಭಾಷೆಯಲ್ಲಿ 'ಕಣ್‌ಡಾಟರ್ ಆಗ್ತೇನೆ' –ಎಂದ. ತಂದೆ ತಕ್ಕ ಮಗ. ಚಿಪ್ ಆಫ್ ದ ಓಲ್ಡ್ ಬ್ಲಾಕ್ –ಎಂದೆಲ್ಲ ಮನದಲ್ಲೇ ಗುಣಗುಣಿಸಿ ನಾನಂದೆ –'ವೆರಿಗುಡ್ –ಆ ಮೇಲೆ ಏನು ಮಾಡ್ತಿ?' ಆಗ ಅವ ಮರು ನುಡಿದ –'ಆ ಮೇಲೆ–ಸ್ಪೀಡಲ್ಲಿ ಹೋಗೋ ಡ್ರೈವರ್ ಅಂಕಲ್‌ಗೆ ಸ್ಟಾಪ್ ಸ್ಟಾಪ್ ಅಂತ ವಿಜಿಲ್ ಊದುತ್ತೇನೆ'

ನನಗೆ ಥಟ್ಟಂತ ಹೊಳಿತು. ಈ ಜೀನಿಯಸ್ ಕನಸು ಕಾಣ್ತಿರೋದು ಕಣ್ಣಿನ ಡಾಕ್ಟರ್ –ನೇತ್ರತಜ್ಞರದ್ದಲ್ಲ –ಬಸ್ಸಿನ ಕಂಡಕ್ಟರದ್ದು –ಅಂತ!

■

---

# ಸೀರೆಯ ಅಂಗಡಿ

ಬಣ್ಣ ಬಣ್ಣದ ಸೀರೆಯ ಅಂಗಡಿಯಲ್ಲಿ
ಬೆದರಿ ಕುಳಿತಿವೆ ಗಂಡುಗಳು
ಒಂದು ಕಡೆ ಎಷ್ಟೊಂದು ಸೀರೆಗಳು
ಇನ್ನೊಂದು ಕಡೆ ಎಷ್ಟೊಂದು ನೀರೆಗಳು
ಎಷ್ಟೊಂದು ಅಂತರ
ಈ ಸೀರೆಗೂ
ಆ ನೀರೆಗೂ
ಅನ್ನುವಂತಿಲ್ಲ ಅನುಭವಿಸುವಂತಿಲ್ಲ
ಕಾಯಲೇಬೇಕು ಆಯ್ಕೆ
ಮುಗಿಯುವವರೆಗೂ

# ಅಪ್ಪಯ್ಯನ ಕೋಪ

● ಪ್ರೇಮಾ ಭಟ್

ನಾವು ನಮ್ಮಪ್ಪಯ್ಯನಿಗೆ ನಾಲ್ಕು ಮಂದಿ ಹೆಣ್ಣುಮಕ್ಕಳು, ಒಬ್ಬ ಹುಡುಗ. ನಾವು ಹೆಣ್ಣುಮಕ್ಕಳು ಕಚ್ಚಾಡುತ್ತಲೇ ಬೆಳೆದೆವು. ಜಾತಿಜಾತಿ ವೈರ್ಯ ಎನ್ನುವ ಹಾಗೆ ಒಬ್ಬರು ಹೇಳಿದ್ದು ಇನ್ನೊಬ್ಬರು ಒಪ್ಪುತ್ತಿರಲಿಲ್ಲ. ಏನಾದರು ಅದು ಅವಳು ಮಾಡಿದ್ದು ತಪ್ಪು ಇವಳು ಮಾಡಿದ್ದು ಸರಿಯಿಲ್ಲ ಎಂದು ಒಬ್ಬರೆಂದರೆ ಅದನ್ನು ಬೆಂಕಿಗೆ ತುಪ್ಪ ಹುಯ್ಯುವಂತೆ ಇನ್ನಿಬ್ಬರಿಗೆ ಹರಿಯಬಿಡುವುದು ತಪ್ಪು ಎಂದು ಯಾರಿಗೂ ಅನ್ನಿಸುತ್ತಿರಲಿಲ್ಲ. ಇದರಿಂದ ಜಗಳ ಕದನ ಯಾವಾಗಲೂ ನಮ್ಮೊಳಗೆ ಇರುತ್ತಿತ್ತು. ಅದು ಅಪ್ಪಯ್ಯನ ಎದುರಿಗಲ್ಲ. ಅಪ್ಪಯ್ಯನಿಗೆ ಕೋಪ ಬರುತ್ತಿರಲಿಲ್ಲ. ಬಂದರೆ ಅವರು ದುರ್ವಾಸ ಮುನಿ, ಅದು ರಕ್ತದ ಬಲ ಹೆಚ್ಚಿಗೆ ಇದ್ದಾಗ. ಕುಡುಕ ಗಂಡನ ಹಿಂಸೆ ತಡೆಯಲಾರದೆ ಮನೆಯಲ್ಲಿ ಬಂದು ಕೂತ ತಂಗಿಯ ಸ್ಥಿತಿಗತಿ ನೋಡಿದ ಮೇಲೆ ಅಪ್ಪಯ್ಯನ ಕೋಪ ಎಲ್ಲಿಗೆ ಹೋಯಿತೋ ದೇವರೆ ಬಲ್ಲ. ಅವರಿಗರಿಯದಂತೆ ಅದು ಅಡಗಿ ಕುಳಿತು ಬಿಟ್ಟಿತು. ಆದರೂ ಅಪ್ಪಯ್ಯನ ಮುಂದೆ ನಿಲ್ಲಲು ನಮಗೆ ಭಯ.

ಅಪ್ಪಯ್ಯ ನನ್ನಂತೆ ಉದ್ದಕ್ಕೆ ಇದ್ದರು. ಅವರ ಮೂಗು ಗಿಳಿಮೂಗು ಎನ್ನುತ್ತಿದ್ದರು ನೋಡಿದವರು. ಎರಡು ಕೆನ್ನೆಗಳ ನಡುವೆ ಹುದುಗಿದ್ದ ಚಿಕ್ಕಚಿಕ್ಕ ಕಣ್ಣುಗಳು. ಚಿಕ್ಕ ಕಣ್ಣುಗಳನ್ನು ಹೊಂದಿದ್ದವರು ಜಿಪುಣರು ಎಂದು ಹಳ್ಳಿಗಳಲ್ಲಿ ಹೇಳುವ ವಾಡಿಕೆ ಮಾತು. ಆದರೆ ಅಪ್ಪಯ್ಯ ಜಿಪುಣರಲ್ಲ. ಮಕ್ಕಳಿಗಿರಲಿ ಇಲ್ಲದಿರಲಿ ಅತಿಥಿ ಸತ್ಕಾರದಲ್ಲಿ ಎತ್ತಿದ ಕೈ ಅವರದು. ಅವರ ಹತ್ತಿರ ಒಂದು ಹಳೆ ಹರಕಲು ಸೈಕಲ್ ಇತ್ತು. ಅದರ ಪೆಡಲ್ ಲೊಟಲೊಟ ಎನ್ನುತ್ತಿತ್ತು. ಚಕ್ರ ಸವೆದು ನುಚ್ಚುನೂರಾಗಿತ್ತು. ಲೊಟಲೊಟನೆಂದು ಅಲುಗಾಡುವ ಆ ಸೈಕಲ್ಲನ್ನು ಬಿಟ್ಟುಕೊಂಡು ಅಪ್ಪಯ್ಯ ಹತ್ತು ಹದಿನೈದು ಕಿಲೋ ಮೀಟರ್ ಹೇಗೆ ಹೋಗುತ್ತಿದ್ದರೊ? ಅವರಿಗೆ ಅದರ ಮೇಲೆ ಅತಿಯಾದ ಮೋಹ. ಅದು ಅವರಿಗೆ ಜೀವದಾತು ಇದ್ದ ಹಾಗೆ. ಅಪ್ಪಯ್ಯ ತನ್ನ ಸೈಕಲನ್ನು ಯಾರಿಗೂ ಮುಟ್ಟಲು ಬಿಡುತ್ತಿರಲಿಲ್ಲ. ಅವರಲ್ಲದೆ ಬೇರೆಯವರು ಬಿಡುವಂತಿಲ್ಲ. ಮುಟ್ಟಿದರೆ ಮುನಿ ಎಂಬಂತಿದ್ದ ಸೈಕಲ್ ಬೇರೆಯವರ ಕೈಗೆ ಸಿಕ್ಕಿ ಪೆಡಲ್ಲೋ ಚಕ್ರವೋ ಮುರಿದರೆ ಎನ್ನುವ ದಿಗಿಲು ಇರಬಹುದು.

ಅಪ್ಪಯ್ಯನಿಗೆ ಕೋಪ ಬಂದರೆ ಮಕ್ಕಳಿಗೆ ಹೊಡೆದು ಬಡಿದು ಮಾಡುತ್ತಿರಲಿಲ್ಲ. ಕೆಟ್ಟ ಅಪಶಬ್ದಗಳನ್ನು ಬಳಸುತ್ತಿರಲಿಲ್ಲ. ಅವರ ಪುಟ್ಟ ಕಣ್ಣುಗಳನ್ನು ಅರಳಿಸಿ ಕೆಕ್ಕರಿಸಿ ತಪ್ಪು ಮಾಡಿದವರ ಕಡೆಗೆ ನೋಡುತ್ತಿದ್ದರು; ಮತ್ತೆ ತಪ್ಪು ಮಾಡಿದವರು ಅವರ ಮುಂದೆ ನಿಲ್ಲುವಂತಿರಲಿಲ್ಲ. ನಿಂತರೆ ಪೆಟ್ಟು ಬೀಳುತ್ತಿತ್ತೋ ಏನೋ ಗೊತ್ತಿಲ್ಲ. ಅವರ ಕಣ್ಣುಗಳನ್ನು ನೋಡಿದರೆ ಸಾಕು ಅಪ್ಪಯ್ಯನಿಗೆ ಸಿಟ್ಟು ಬಂದಿದೆ ಎಂದು ಗೊತ್ತಾಗಿ ಬಿಡುತ್ತಿತ್ತು

ನಾವಾರು ಜಗಳ ಮಾಡುವುದನ್ನು ಬಿಟ್ಟರೆ ತಪ್ಪು ಮಾಡುತ್ತಿರಲಿಲ್ಲ. ನಮಗೆ ಶಾಲೆಗೆ ಬೇಕಾದ ಫೀಸು ಇತ್ಯಾದಿಗಳು ಬೇಕಿದ್ದರೆ ಅಮ್ಮನ ಸೆರಗ ಮರೆಯಲ್ಲಿ

ನಿಂತು ಅಮ್ಮನನ್ನು ಕೇಳುತ್ತಿದ್ದೆವು. ಅಪ್ಪಯ್ಯ ಎದುರಿಗೆ ಇದ್ದರೂ ನೇರವಾಗಿ ಅವರನ್ನು ಕೇಳುತ್ತಿರಲಿಲ್ಲ. ಅಷ್ಟೊಂದು ಭಯ ನಮಗೆ ಅಪ್ಪಯ್ಯನಲ್ಲಿ. ಅಪ್ಪಯ್ಯ ನಮಗೆ ಇಂಥದ್ದು ಬೇಕು ಎಂದು ನಾವಾರು ಅಪ್ಪಯ್ಯನಲ್ಲಿ ಕೇಳಿದವರಲ್ಲ. ಕೇಳುವುದಕ್ಕಾದರೂ ಏನಿತ್ತು ಅವರ ಕೈಲಿ. ಮದುವೆ ಮುಂಜಿಗಳಲ್ಲಿ ನಳಪಾಕ ಇಳಿಸುತ್ತಿದ್ದ ಅಪ್ಪಯ್ಯನಿಗೆ ಆ ಮನೆಯವರು ಕೊಡುವ ದುಡ್ಡಿನಲ್ಲೇ ಜೀವನ. ಅಮ್ಮ ಮನೆಯಲ್ಲಿ ಮಾಡುತ್ತಿದ್ದ ಹಪ್ಪಳ ಉಪ್ಪಿನಕಾಯಿ ಮಾರಾಟದಿಂದ ಬರುತ್ತಿದ್ದ ಹಣದಿಂದ ಜೀವನ ನಡೆಸುವುದೇ ದುಸ್ತರವಾಗಿದ್ದಂತಹ ಪರಿಸ್ಥಿತಿಯಲ್ಲಿ ಏನು ತಾನೆ ತೆಗೆಸಿಕೊಟ್ಟಾರು.

ಒಮ್ಮೆ ಅಪ್ಪಯ್ಯನ ಮೊಮ್ಮಗ ಸೈಕಲ್ ಪೆಡಲನ್ನು ಮುರಿದು ಬಿಟ್ಟ. ಯಾರು ಮುರಿದದ್ದು ಎಂದು ಅಪ್ಪಯ್ಯ ಕೇಳಿದಾಗ ಅವನು ಬಾಯಿ ಬಿಡಲಿಲ್ಲ. ಯಾವತ್ತೂ ಕೈಗೆ ಕೋಲು ತೆಗೆದುಕೊಳ್ಳದ ಅಪ್ಪಯ್ಯ. ಆದಿನ ಕೈಗೆ ಕೋಲು ತೆಗೆದುಕೊಂಡೇ ಬಿಟ್ಟರು. ಇನ್ನು ಗೊತ್ತಾದರೆ ಅಜ್ಜಯ್ಯ ಸುಮ್ಮನಿರೋಲ್ಲ ಎಂದುಕೊಂಡ ಮೊಮ್ಮಗ ಬಾಯಿ ಬಿಟ್ಟ. ಸೈಕಲ್ ಬೀಳಿಸಿದ್ದು ನಾನೆ, ಪೆಡಲ್ ಮುರಿದದ್ದು ನಾನೆ. ಅಪ್ಪಯ್ಯ ಕೂಡಲೇ ಶಾಂತವಾದರು, ಕೈಲಿದ್ದ ಕೋಲು ಕೆಳಗೆ ಜಾರಿ ಬಿತ್ತು. ಅವರಿಗೆ ಸತ್ಯ ಬೇಕಾಗಿತ್ತು. ಯಾವಾಗ ಮೊಮ್ಮಗ ಸತ್ಯ ಹೇಳಿದನೋ ಆಗಲೆ ಅಪ್ಪಯ್ಯನ ಕೋಪವೂ ಇಳಿದು ಹೋಗಿತ್ತು. ಅವರಿಗೆ ಸತ್ಯ ಬೇಕಾಗಿತ್ತು. ಏನೇ ತಪ್ಪು ಮಾಡಿದರೂ ಒಪ್ಪಿಕೊಂಡು ಬಿಟ್ಟರೆ ಅಪ್ಪಯ್ಯ ಶಾಂತ ಮೂರ್ತಿ. ಅಮ್ಮ ಅಪ್ಪಯ್ಯನ ಜೊತೆಯಲ್ಲಿ ಎದುರು ಮಾತು ಆಡಿದ್ದನ್ನೇ ನಾನು ನೋಡಿಲ್ಲ. ಅಪ್ಪಯ್ಯನಿಗೆ ತಾನು ಹೇಳಿದ್ದೇ ಆಗಬೇಕು. ಸದ್ದಿಲ್ಲದೆ ಅಮ್ಮ ಅವರ ಮಾತನ್ನು ವಿರೋಧಿಸದೆ ಒಪ್ಪಿಕೊಳ್ಳುತ್ತಿದ್ದಳು. ಇಂಥ ಸಂಸಾರದಲ್ಲಿ ಡೈವೋರ್ಸ್ ಎನ್ನುವ ಪದವೇ ಇಂಗಿ ಹೋಗಿ ಬಿಡುತ್ತದೆ. ಆ ಪದವನ್ನು ಇಂದಿನ ಸಡಗರದ ಸಂಸಾರದಲ್ಲಿ ನೋಡುತ್ತೇವೆ. ಹರೆಯದವರಿರಲಿ ಹಳತಾದ ದಾಂಪತ್ಯ ಜೀವನವೂ ಹಳಸಿ ಹೋಗುತ್ತಿದೆ. ವೃದ್ಧಾಪ್ಯದಲ್ಲಿ ಒಟ್ಟಿಗಿರ ಬೇಕಾದ ಜೀವಗಳು ಬೇರೆಬೇರೆಯಾಗಿ ಬದುಕುವುದನ್ನು ನೋಡುತ್ತಿದ್ದೇವೆ. ಮಕ್ಕಳ ಜವಾಬ್ದಾರಿ ಕಳೆದುಕೊಳ್ಳುವವರೆಗೆ ಹಲ್ಲು ಕಚ್ಚಿಕೊಂಡು ಸಂಸಾರ ಮಾಡುತ್ತಿದ್ದ ವೃದ್ಧರಿಬ್ಬರು ಅದೇನು ಕಾರಣವೋ ಜಗಳವಾಡಿ ಬೇರು ಬಿಟ್ಟ ಮರ ಒಂದೊಮ್ಮೆ ಉರುಳಿ ಬೀಳುವಂತೆ ಬೇರೆಬೇರೆಯಾಗಿ ಬದುಕುವುದನ್ನು ನಾನು ನೋಡಿದ್ದೇನೆ. ಹಾಗೆ ನೋಡಿದರೆ ಅಪ್ಪಯ್ಯ ಕಪ್ಪು ಎಂದು ಹೇಳಲಾರೆ. ಗೋಧಿಬಣ್ಣ ಅಪ್ಪಯ್ಯನದು, ಅಮ್ಮ ಬೆಳದಿಂಗಳು. ಅಮ್ಮ ಬೆಳದಿಂಗಳು ಆಗಿದ್ದುದರಿಂದಲೇ ಅಪ್ಪಯ್ಯನಿಗಿದ್ದ ಕೋಪ ತಣ್ಣಗಾಗಿ ಬಿಡುತ್ತಿತ್ತೇನೊ! ಗೊತ್ತಿಲ್ಲ.

■

**ಕಾರಣ**

ಆಕೆಗೆ ಮಕ್ಕಳೆಂದರೆ ತುಂಬಾ ಇಷ್ಟ. ನೆರೆಮನೆಯ ಮಕ್ಕಳೊಂದಿಗೆ ಕಾಲ ಕಳೆಯುತ್ತಿದ್ದಳು. ಆದರೆ ಆಕೆಗೆ ಇದ್ದದ್ದು ಒಂದೇ ಮಗು. ಇನ್ನೊಂದು ಮಗು ಆಗಲಿ ಬಿಡಮ್ಮಾ ಎಂದು ನೆರೆ ಮನೆಯ ಆಂಟಿ ಸಲಹೆ ಮಾಡಿದರು.

ಓ! ಬೇಡಾ ಆಂಟಿ, ಸಿಲಬಸ್ ತುಂಬಾ ಇರುತ್ತದೆ ಈಗ.

# ಮಾಸ್ತಿ ತಾಯಿ ಮತ್ತು ಮಗು

***ಬೆಳಗೆರೆ ಕೃಷ್ಣಶಾಸ್ತ್ರಿಗಳ 'ಸಾಹಿತಿಗಳ ಸ್ಮೃತಿ' ಪುಸ್ತಕದಿಂದ***

ಒಮ್ಮೆ ಮಾಸ್ತಿಯವರನ್ನು ನೋಡಲು ಮಹಿಳೆಯರ ಗುಂಪೊಂದು ಅವರ ಮನೆಗೆ ಹೋಯಿತು. ಮಹಿಳೆಯರ ಸ್ಥಾನಮಾನಗಳ ಬಗ್ಗೆ ಸುಮಾರು ಹೊತ್ತು ಮಾತುಕತೆ ನಡೆಯಿತು. ಆಗ ಹದಿ ವಯಸ್ಸಿನ ಒಬ್ಬಾಕೆ 'ನಾನೊಂದು ಪ್ರಶ್ನೆ ಕೇಳಲೇ ಸಾರ್?' ಎಂದರು.

'ಕೇಳಿ ಕೇಳಿ ಏನು ಬೇಕಾದರೂ ಕೇಳಿ ಸಂಕೋಚವೇಕೆ?' ಎಂದರು ಮಾಸ್ತಿ ನಗುತ್ತಾ.

'ತಾವು ವಯಸ್ಸಿನಲ್ಲಿದ್ದಾಗ ತಮ್ಮ ಹೆಂಡತಿಯನ್ನಲ್ಲದೇ ಬೇರೊಬ್ಬ ಹೆಂಗಸನ್ನು ಪ್ರೀತಿಸಿದ್ದು ಉಂಟೆ ಸಾರ್?' ಎಂದು ಕೇಳಿದರು.

ಆ ಹುಡುಗಿ ಆಡಿದ ಮಾತಿನಿಂದ ಎಲ್ಲರ ಮನಸ್ಸು, ಮುಖವೂ ಮುದಡಿ ಕಪ್ಪಿಟ್ಟುಹೋಯಿತು.

ಆದರೆ ಮಾಸ್ತಿ ನಗುನಗುತ್ತಲೇ 'ಹೌದಮ್ಮ, ಹೌದು ತಾಯಿ, ನಿಮ್ಮ ಮಾತು ನಿಜ. ನಾನು ನನ್ನ ಹೆಂಡತಿಯನ್ನಲ್ಲದೆ ಬೇರೆ ಹೆಂಗಸನ್ನು ಪ್ರೀತಿಸಿದ್ದುಂಟು' ಎಂದರು.

ನೆರೆದವರಿಗೆಲ್ಲ ದಿಗ್ಭ್ರಮೆಯಾಯಿತು. ಪ್ರಶ್ನೆ ಕೇಳಿದ ಆಕೆ ಒಂದು ಬಲವಾದ ಕೋಟೆಯನ್ನೇ ಗೆದ್ದಂತೆ ಗತ್ತಿನಿಂದ ಅಲ್ಲಿದ್ದವರೆನ್ನೆಲ್ಲ ತಲೆ ಎತ್ತಿ ನೋಡಿದರು.

ಮಾಸ್ತಿ ಹಸನ್ಮುಖರಾಗಿಯೇ ಮಾತನಾಡಿದರು. 'ಕೇಳಿ, ನನ್ನ ಧರ್ಮ ಪತ್ನಿಯನ್ನಲ್ಲದೇ ನಾನು ವಿಶೇಷವಾಗಿ ಪ್ರೀತಿಸಿದ ಹೆಣ್ಣು ನನ್ನ ತಾಯಿ, ನನ್ನ ಹೆತ್ತವ್ವ, ನನಗೆ ಜನ್ಮವಿತ್ತ ದೇವತೆ' ಎಂದರು.

ಸ್ಥೂಲ ಸೂಕ್ಷ್ಮಗಳ ಪರಿಜ್ಞಾನವೇ ಇಲ್ಲದ ಆಕೆಯ ಬಾಯಿಂದ ಬಂತು 'ಅಯ್ಯೋ! ಅಷ್ಟೇನೆ' ಎಂದ ಉದ್ಗಾರ.

ಕೂಡಲೆ ಮಾಸ್ತಿ ಕಣ್ಣರಳಿಸಿ ನುಡಿದರು: 'ಏಕೆ ಅಯ್ಯೋ ಎನ್ನುತ್ತೀರಿ. ನಾನು ನನ್ನ ತಾಯಿಯನ್ನು ವಿಶೇಷವಾಗಿ ಪ್ರೀತಿಸಿದ್ದು ತಪ್ಪೆ?' ಎನ್ನುತ್ತಾ ಅಲ್ಲಿದ್ದವರೆನ್ನೆಲ್ಲಾ ಒಮ್ಮೆ ದಿಟ್ಟಿಸಿ ಮತ್ತೆ ನುಡಿದರು.

'ಹಾಗಾದರೆ ನೀವು ನಿಮ್ಮ ತಾಯಿಯನ್ನು ಪ್ರೀತಿಸುವದಿಲ್ಲವೆ? ತಾಯಿ ಇಲ್ಲದೆ ನಾವೇ? ನಮ್ಮನ್ನು ಹೊತ್ತು ಹೆತ್ತು ಸಾಕಿ ಸಲಹಿ ದೊಡ್ಡವರನ್ನು ಮಾಡಲಿಲ್ಲವೆ? ನಮಗೆ ಸ್ವಲ್ಪ ಆರೋಗ್ಯ ಕೆಟ್ಟರೂ, ನೆಗಡಿ ಕೆಮ್ಮು ಜ್ವರ ಬಂದರೂ ನಮ್ಮ ತಾಯಿ ಗಾಬರಿಗೊಳ್ಳಲಿಲ್ಲವೆ? ನಮಗಾಗಿ ಔಷಧಿ ಪಥ್ಯಗಳನ್ನು ತಂದು ಪಾಲಿಸಲಿಲ್ಲವೆ? ಹೊಟ್ಟೆ ಬಟ್ಟೆ ಕಟ್ಟಲಿಲ್ಲವೆ? ನಮ್ಮನ್ನು ಹಾಗೆ ಜೋಪಾನ ಮಾಡದಿದ್ದರೆ ನಾವೆಲ್ಲಿರುತ್ತಿದ್ದವು? ಯೋಚಿಸಿ ನೋಡಿ ನಿಮ್ಮ ತಾಯಿಯೂ ಹೇಗೆ ನಿಮ್ಮನ್ನು ಈ ತನಕ ಜೋಪಾನ ಮಾಡಿದ್ದಾರೆ. ನೀವು ಅತ್ತ ಕಡೆ ಗಮನಿಸಿಲಿಲ್ಲ ಚಿಂತಿಸಲಿಲ್ಲ' ಎಂದೆಲ್ಲ ಮುಂದುವರೆಸಿದರು. ಇಷ್ಟರಲ್ಲಿ ಆಕೆಯ ಮುಖ ಕಪ್ಪಿಟ್ಟು ನೆಲ ನೋಡುತ್ತಿತ್ತು. ಮಿಕ್ಕವರೆಲ್ಲ ನಿರಾಳವಾಗಿ ಉಸಿರಾಡುವಂತಾಯಿತು.

ಮಾಸ್ತಿ ಮುಂದುವರೆಸಿದರು: 'ನೋಡೀ, ನನ್ನ ಇದ್ದಷ್ಟು ದಿನಗಳು ನಾನು ಬೆಳಿಗ್ಗೆ ಎದ್ದ ಕೂಡಲೇ ಅವರೆಲ್ಲಿದ್ದರೂ ಅಲ್ಲಿಗೆ ಹೋಗಿ ಅವರ ಪಾದ ಮುಟ್ಟಿ ನಮಸ್ಕರಿಸಿದ ನಂತರವೇ ನನ್ನ ದಿನಚರಿ ಪ್ರಾರಂಭವಾಗುತ್ತಿತ್ತು. ಈಚೆಗೆ ಅವರು ತೀರಿಕೊಂಡಮೇಲೆ

ಅವರ ಭಾವಚಿತ್ರಗಳನ್ನು ಪಾದಗಳು ಕಾಣುವಂತೆ ದೊಡ್ಡದಾಗಿ ಮಾಡಿಸಿ ಈ ಒಳ ಬಾಗಿಲಿನ ಮೇಲೆ ಹಾಕಿದ್ದೇನೆ. ಈಗಲೂ ಪ್ರತಿನಿತ್ಯ ಎದ್ದಕೂಡಲೇ ಆ ಕಾಲುಗಳನ್ನು ಮುಟ್ಟಿ ನಮಸ್ಕರಿಸಿ ಮೇಲೆಯೇ ನನ್ನ ಮುಂದಿನ ಕೆಲಸ. ನಿಮಗದು ಚಿತ್ರದ ಬೊಂಬೆಯಾಗಿ ಕಾಣಿಸಬಹುದು. ನೀವದನ್ನು ಕೇವಲ ಫೋಟೊ ಎನ್ನಬಹುದು. ಆದರೆ ಅದರಲ್ಲಿ ನಾನು ನನ್ನ ತಾಯಿಯನ್ನು ಕಾಣುತ್ತೇನೆ. ನನ್ನ ನಿಶ್ಚಯದಂತೆ ಅದು ನನ್ನ ಅಮ್ಮ. ಮಹಿಳಾ ವರ್ಷ ಆಚರಿಸುತ್ತಿರುವ ನಿಮಗೆಲ್ಲ ಈ ವಿಚಾರದಲ್ಲಿ ಸ್ಪಷ್ಟವಾದ ನಿಶ್ಚಯವಿರಬೇಕು. ಮಹಿಳೆಯರ ಹಿರಿಮೆಯನ್ನು ಮೆರೆಯುವಾಗ ತಾಯಿಯ ಹಿರಿಮೆಯನ್ನು ಮರೆಯಬಾರದು.'

ಈ ಎಡವಟ್ಟಿನ ಪ್ರಶ್ನೆ ಕೇಳಿದ ತರುಣಿಯ ಕಣ್ಣಿನಿಂದ ನೀರು ತೊಟ್ಟಿಕ್ಕುತ್ತಿತ್ತು. ಮಾಸ್ತಿ ಮತ್ತೆ ಪ್ರಾರಂಭಿಸಿದರು. 'ನೀವು ಈ ಪ್ರಶ್ನೆ ಕೇಳಿದ್ದು ಒಳ್ಳೆಯದಾಯಿತು ತಾಯಿ ತಪ್ಪೇನಿಲ್ಲ. ಇಷ್ಟು ನೇರವಾಗಿ ಕೇಳದೇ ಹೋಗಿದ್ದರೆ ತಾಯಿಯ ಸ್ಥಾನವನ್ನು ಕುರಿತಂತೆ ನಿಮ್ಮ ನಮ್ಮ ನಿಶ್ಚಯದಲ್ಲಿ ಅಜಗಜಾಂತರ ಉಳಿದುಬಿಡುತ್ತಿತ್ತು. ಬೇಸರ ಪಡಬೇಕಾದ ಕಾರಣವಿಲ್ಲ. ಆದರೂ ಈಗಿನ ವಿದ್ಯಾವಂತರಾದ ನಿಮ್ಮಂತಹವರು ಇನ್ನೂ ಹೆಚ್ಚಿನ ವಿಚಾರವಂತರಾಗಿರಬೇಕು ಅಷ್ಟೆ' ಎಂದು ಹೇಳಿದರು. ಕಾಪಿ ಕೊಟ್ಟು ಬೀಳ್ಕೊಟ್ಟರು.

ಮಾಸ್ತಿ ಮತ್ತೆ ನನ್ನೊಡನೆ ಮಾತು ಮುಂದುವರೆಸಿ 'ನೋಡಿ ನಾನು ಈ ಊರಿನಲ್ಲಿ ದೊಡ್ಡ ಸಾಹೇಬನಾಗಿದ್ದೆ. ಒಂದು ದಿನ ಸ್ವಲ್ಪ ಮುಂಚೆಯೇ ಮನೆ ಬಿಡಬೇಕಾಯಿತು. ಕಾರು ಬಂತು. ಕಾರ್ಯದರ್ಶಿ ಬಂದರು. ಸಿಬ್ಬಂದಿ ಫೈಲುಗಳನ್ನು ಒಪ್ಪವಾಗಿ ಜೋಡಿಸಿ ಕಾರಿನಲ್ಲಿಟ್ಟರು. ನಾನು ನನ್ನ ಆಫೀಸ್ ಡ್ರೆಸ್ ಧರಿಸಿ ಕಾಂಪೌಂಡಿಗೆ ಬಂದೆ. ಡ್ರೈವರ್ ಕಾರಿನ ಬಾನೆಟ್ ಎತ್ತಿ ಏನೋ ಮಾಡುತ್ತಿದ್ದರು. ನಾನು ಅಲ್ಲಿಯೇ ಮೈತುಂಬಾ ದಟ್ಟವಾಗಿ ಅರಳಿ ನಿಂತಿದ್ದ ಹೂಗಿಡಗಳನ್ನು ನೋಡುತ್ತಾ ಒಂದು ಪಕ್ಕದಲ್ಲಿ ನಿಂತಿದ್ದೆ. ಅಷ್ಟರಲ್ಲಿ ನನ್ನ ತಾಯಿ ಒಳಗಿನಿಂದ ಬಂದು ' ಈ ಮಗು ಎಲ್ಲಿ ಹೋಯಿತೋ?' ಎಂದು ಅಲ್ಲಿದ್ದ ಜವಾನನ್ನು ಕೇಳಿದರು. ಅಲ್ಲಿ ಯಾವ ಮಗುವೂ ಬಂದಿರಲಿಲ್ಲ. ಆದ್ದರಿಂದ 'ನಾವು ನೋಡಲಿಲ್ಲ ಅಮ್ಮಾವ್ರೆ' ಎಂದ ಜವಾನ.

ನನ್ನ ತಾಯಿ ಕೂಡಲೇ ಒಳಗೆ ಹೋಗಿ ಮತ್ತೆ ಬಂದು 'ಇಷ್ಟು ಮಂದಿ ಇದ್ದೀರಿ ಒಬ್ಬನಾದರೂ ಈ ಮಗು ಎಲ್ಲಿ ಹೋದ ಅಂತ ಗಮನಿಸಲೇ ಇಲ್ಲವೆ? ಎಂದು ಸಿಡಿಮಿಡಿಗೊಂಡರು. ಅಷ್ಟರಲ್ಲಿ ವಯಸ್ಸಾಗಿದ್ದ ಒಬ್ಬ ಜವಾನ 'ಯಾರು ಅಮ್ಮಾವ್ರೆ, ಸಾಹೇಬರನ್ನೇ ತಾವು ಕೇಳ್ತಾ ಇರೋದು?' ಎಂದ ಅನುಮಾನದಿಂದ.

ನಮ್ಮಮ್ಮನಿಗೆ ಎಲ್ಲಿಲ್ಲದ ಕೋಪ ಬಂತು.

'ಹೋ! ನಿಮ್ಮ ಸಾಹೇಬ ನನ್ನ ಮಗು, ಎಲ್ಲಿ ಅವನು' ಎಂದರು.

ಇದನ್ನೆಲ್ಲ ವಿನೋದವಾಗಿ ನೋಡುತ್ತಿದ್ದ ನಾನು 'ಏನಮ್ಮ' ಎನ್ನುತ್ತಾ ಅವರತ್ತ ಬಂದೆ.

'ಏನೋ ಮಗು, ಇಷ್ಟು ಬೇಗನೆ ಎಲ್ಲೋ ಹೊರಟಂತಿದೆ. ಹೊಟ್ಟೆಗೆ ಏನಾದರೂ ಹಾಕಿಕೊಂಡು ಹೋಗಬಾರದೆ? ಬಾ ಒಳಗೆ' ಎಂದು ಕರೆದು ಅವಲಕ್ಕಿ ಮೊಸರು ಕೊಟ್ಟರು.

ನೋಡೀ ನಾವೆಷ್ಟೇ ದೊಡ್ಡವರಾಗಿರಲಿ ತಾಯಿಗೆ ಮಗುವೇ ತಾಯಿಯಲ್ಲದೆ ಇನ್ನಾರಿಗೆ ತಾನೇ ವಾತ್ಸಲ್ಯ, ಪ್ರೀತಿ, ಕರುಣೆ, ಸಲುಗೆ, ಅಧಿಕಾರ ಇರಲು ಸಾಧ್ಯ. ಎಂದರು.